ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 48 ನವೆಂಬರ್ 25, 1984 ಬೆಲೆ 60 ಪೈಸೆ.

ಈಗಿನ ಲೋಕಸಭೆಯಲ್ಲಿ ವಿವಿಧ ಪಕ್ಷಗಳ ಬಲಾಬಲ

ಲೋಕ ಸಭೆಯ ಸದಸ್ಯರ ಸಂಖ್ಯೆ—543. 25 ಸ್ಥಾನಗಳು ಖಾಲಿಯಾಗಿವೆ. ಕಾಂಗ್ರೆಸ್ (ಐ) 339, ಸಿ. ಪಿ. ಐ. (ಎಂ) 36 ಲೋಕದಳ—23, ಜನತಾ ಪಕ್ಷ—21, ಬಿ. ಜೆ. ಪಿ.—16, ಡಿ. ಎಂ. ಕೆ.—14, ಸಿ. ಪಿ. ಐ.—13, ಡಿ. ಎಸ್. ಪಿ.—8, ಕಾಂಗ್ರೆಸ್ (ಎಸ್)—5, ಆರ್. ಎಸ್. ಪಿ—4, ಮುಸ್ಲಿಂ ಲೀಗ್ —3, ಫಾರ್ವರ್ಡ್ ಬ್ಲಾಕ್—3, ಸಂಜಯ ಮಂಚ—3, ಜನವಾದಿ—2, ಕಾಂಗ್ರೆಸ್ (ಜೆ) 2, ತೆಲುಗು ದೇಶಂ—2, ಪಕ್ಷೇತರರು—18,

ಕಾಂಗ್ರೆಯನ್ನು ಸೋಲಿಸಲು ಅಣಿಯಾಗಿರಿ

ಸಿ. ಪಿ. ಐ. (ಎಂ) ಕರ್ನಾಟಕ ರಾಜ್ಯ ಸಮಿತಿಯ ನಿರ್ಣಯ

ಸಿ. ಪಿ. ಐ. (ಎಂ) ಕರ್ನಾಟಕ ರಾಜ್ಯ ಸಮಿತಿಯ ಸಭೆ ನವೆಂಬರ್ 19-20 ರಂದು ಕೆ. ಆರ್. ಶ್ರೀಯಾನ್ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಸೇರಿ ಇಂದಿನ ದೇಶದ ರಾಜಕೀಯ ಪರಿಸ್ಥಿತಿ, ಅದರಂತೆಯೇ ನಮ್ಮ ರಾಜ್ಯದ ಪರಿಸ್ಥಿತಿಯನ್ನು ಅದರೊಂದಿಗೆ ಸದ್ಯ ಪ್ರಾರಂಭವಾಗಿರುವ ಲೋಕಸಭೆ ಚುನಾವಣೆಯ ಕುರಿತು ವಿಚಾರ ವಿನಿಮಯ ಮಾಡಿ ಕೆಲವು ನಿರ್ಣಯಗಳನ್ನು ಕೈಗೊಂಡಿತು.

ಸಿ. ಪಿ. ಐ. (ಎಂ) ಪ್ರಧಾನ ಕಾರ್ಯದರ್ಶಿ ಕಾ| ಇ. ಎಂ. ಎಸ್. ನಂಬೂದರಿಪಾಡ್ ಅವರು ರಾಷ್ಟ್ರೀಯ ಅಂತರ ರಾಷ್ಟ್ರೀಯ ಬೆಳವಣಿಗೆಗಳ ಕುರಿತು ವರದಿ ಮಾಡುತ್ತ ಅಮೆರಿಕದಲ್ಲಿ ರೇಗನ್ ಅವರು ಅಧ್ಯಕ್ಷರಾಗಿ ಆರಿಸಿ ಬಂದಿರುವುದರಿಂದ ಜಗತ್ತಿನಲ್ಲಿ ಯುದ್ಧದ ಭಯ ಹೆಚ್ಚಾಗಿದೆಯೆಂದು ಮಧ್ಯ ಅಮೆರಿಕ ಹಾಗೆಯೇ ಇತರ ದೇಶಗಳಲ್ಲಿ ಅಮೆರಿಕದ ಕೈವಾಡ ತೀವ್ರಗತಿಯಿಂದ ಮುಂದುವರಿದು, ಹಲವಾರು ದೇಶಗಳಲ್ಲಿ ಅಸ್ಥಿರತೆ, ಅಂತರ್ಯುದ್ಧ ಉಂಟಾಗಿ, ಸ್ವತಂತ್ರರಾಷ್ಟ್ರಗಳಿಗೆ ಅಪಾಯ ಜಾಸ್ತಿಯಾಗಬಹುದೆಂದೂ ಆದ್ದರಿಂದ ಅಮೆರಿಕದ ಯುದ್ಧನೀತಿಯ ವಿರುದ್ಧ ಜನಭಿಪ್ರಾಯ ಮೂಡಿಸಿ ಶಾಂತಿ ಚಳುವಳಿಯನ್ನು ಬಲಗೊಳಿಸಬೇಕೆಂದೂ ಹೇಳಿದರು.

ಇಂದಿರಾ ಗಾಂಧಿಯ ಹತ್ಯೆಯ ನಂತರ ದೇಶದಲ್ಲುಂಟಾಗಿರುವ ಪರಿಸ್ಥಿತಿಯನ್ನು ವಿವರಿಸುತ್ತಾ, ಅಸ್ಸಾಂ, ಪಂಜಾಬ್, ಹಾಗೆಯೇ ಬೇರೆಡೆಗಳಲ್ಲಿ ಅಮೆರಿಕದ ಸಾಮ್ರಾಜ್ಯಶಾಹಿಗಳು ಜಾತಿಯವಾದಿ, ಛಿದ್ರಕಾರಿ, ಭಯೋತ್ಪಾದಕ, ಶಕ್ತಿಗಳನ್ನೆಲ್ಲ ಧನ ಸಹಾಯ ಮಾಡಿ ದೇಶದಲ್ಲಿ ಗೊಂದಲವೆಬ್ಬಿಸಿ, ಕಲಿಸ್ತಾನ, ವಿದೇಶೀಯರ ಪ್ರಶ್ನೆಗಳನ್ನೆಲ್ಲ ಉಪಯೋಗಿಸಿ ಭಾರತ ದೇಶವನ್ನು ವಿಭಜಿಸುವ ಹೊಂಚು ಹಾಕಿದೆ. ಹಲವಾರುಕಡೆ ಈ ಏಜೆಂಟರು ಸಕ್ರಿಯವಾಗಿ ಒಳಸಂಚು ನಡೆಸಿದ್ದಾರೆ. ಅಂಥವರನ್ನು ಗುರ್ತಿಸಿ, ಅವರನ್ನು ಪ್ರತ್ಯೇಕಿಸಿ, ದೇಶದ ಸಮಗ್ರತೆಯನ್ನು ಕಾಪಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹೇಳುತ್ತ ಬಂದಿದ್ದರೂ ಕೂಡ, ಇಂದಿರಾಗಾಂಧಿ ನಾವುಕೊಟ್ಟ ಎಚ್ಚರಿಕೆ, ಸಲಹೆಗಳನ್ನೆಲ್ಲ ಕಡೆಗಣಿಸಿದ ಕಾರಣದಿಂದಾಗಿಯೇ ಇಂದಿರಾ ಗಾಂಧಿ ಸ್ವತಃ ಅಂಥ ಶಕ್ತಿಗಳ ಒಳಸಂಚಿಗೆ ಬಲಿಯಾಗಬೇಕಾಯಿತೆಂದು ಹೇಳಿದರು.

ಅಮೆರಿಕನ್ ಸಾಮ್ರಾಜ್ಯಶಾಹಿಯ ಸಿ. ಐ. ಎ. ಏಜಂಟರ ಬೆಂಬಲಿಗರೆಲ್ಲ ಇಂದಿರಾ ಗಾಂಧಿಯ ಹತ್ಯೆಯಿಂದುಟಾದ ರಾಜಕೀಯ ಅಸ್ಥಿರತೆಯನ್ನುಪಯೋಗಿಸಿಕೊಂಡು ಸಿಖ್ ಜನಾಂಗದ ವಿರುದ್ಧ ಪ್ರತಿಕಾರದ ಕ್ರಮ ಕೈಗೊಂಡಾಗ, ದಿಲ್ಲಿಯಲ್ಲಿ ಇಡೀ ಆಡಳಿತೆಯೇ ಕುಸಿದು ಬಿದ್ದಾಗ ನಮ್ಮ ಪಕ್ಷ ಭಯೋತ್ಪಾದಕ ಘಟನೆಗಳನ್ನೆದುರಿಸಲು ಸಮರ್ಪಕವಾದ ಸೂಚನೆಗಳನ್ನಿತ್ತು ಸರಕಾರ ಭದ್ರವಾಗಿರಬೇಕೆಂದು ಸಹಾಯ ಮಾಡಿತು. ಆದರೆ ಕಾಂಗ್ರೆ ಪಕ್ಷದಲ್ಲಿಯೇ ಇರುವ ಮತೀಯವಾದಿಗಳೂ, ಅಧಿಕಾರಿಗಳೂ, ನಮ್ಮ ಸೂಚನೆಗಳಂತೆ ಶಾಂತಿ ಕಾಪಾಡುವಲ್ಲಿ ವಿಫಲರಾದರು.

ನಮ್ಮ ಪಕ್ಷ ಹಾಗೂ ದೇಶದಮುಂದೆ ಇರುವಂಥ ಅತಿ ಮಹತ್ವದ ಪ್ರಶ್ನೆಯಾವುದೆಂದರೆ ಅಮೆರಿಕನ್ ಸಾಮ್ರಾಜ್ಯಶಾಹಿಗಳಿಂದ ನಮ್ಮ ದೇಶದ ಸಮಗ್ರತೆ ಐಕ್ಯತೆಯನ್ನು ಕಾಪಾಡುವುದಾಗಿದೆ. ಇಷ್ಟು ವರ್ಷ ನಮ್ಮ ದೇಶ ಅನುಸರಿಸುತ್ತ ಬಂದ ತಟಸ್ಥ ನೀತಿಯನ್ನು ಸೋವಿಯತ್ ಪರ ನೀತಿಯನ್ನು ಉಳಿಸಿಕೊಂಡು ಮುಂದುವರಿಸುವುದಾಗಿದೆ. ಇದರ ಸಲುವಾಗಿ ಹೋರಾಟ ಮುಂದುವರಿಯಬೇಕು.

ದೇಶದ ಸಮಗ್ರತೆಯನ್ನು ಉಳಿಸುವ ಶಕ್ತಿ ಈಗಿರುವ ಕಾಂಗ್ರೆಯಿಂದ ಸಾಧ್ಯವಿಲ್ಲ. ಆದ್ದರಿಂದ ಕಾಂಗ್ರೆಸ್ಸನ್ನು ಲೋಕಸಭೆಯ ಚುನಾವಣೆಯಲ್ಲಿ ಸೋಲಿಸಬೇಕೆಂದು ಕಾ|| ಇ. ಎಂ. ಎಸ್. ಹೇಳಿದರು.

ರಾಜ್ಯದ ರಾಜಕೀಯ ಪರಿಸ್ಥಿತಿಯನ್ನೂ ಚುನಾವಣೆಯ ಹೊಂದಾಣಿಕೆಯ ಕುರಿತು ಸುದೀರ್ಘ ಚರ್ಚೆ ನಡೆಸಿ, ಉಡುಪಿ ಮತ್ತು ಬೆಂಗಳೂರು ಉತ್ತರದಲ್ಲಿ ಮಾತ್ರ ಸ್ಪರ್ಧಿಸಲೇಬೇಕೆಂದೂ ನಿರ್ಣಯಿಸಿ, ಮುಖ್ಯಮಂತ್ರಿಯೊಡನೆ ಹೊಂದಾಣಿಕೆ ಕುರಿತು ಚರ್ಚೆಮಾಡಿದ ನಂತರ ಕೊನೆ ನಿರ್ಣಯ ತೆಗೆದುಕೊಳ್ಳುವ ಅಧಿಕಾರವನ್ನು ರಾಜ್ಯ ಸೆಕ್ರೆಟರಿಯೇಟ್ ಹಾಗೂ ಪಾಲಿಟ್ ಬ್ಯೂರೋಗೆ ಬಿಟ್ಟುಬಿಡಲಾಯಿತು.

ಜನತಾ ಪಕ್ಷ ಬಿ. ಜೆ. ಪಿ. ಜೊತೆ ಮಾಡಿಕೊಳ್ಳುವ ಒಡಂಬಡಿಕೆಗೆ ನಮ್ಮ ಪಕ್ಷ ಬದ್ಧವಲ್ಲವೆಂದೂ ನಿರ್ಣಯಿಸಿತು. ಜನತಾ ಪಕ್ಷ ಉಡುಪಿ ಮತಕ್ಷೇತ್ರದಲ್ಲಿ ಸ್ಪರ್ಧಿಸದೆ ಬಿಜೆಪಿ ಪಕ್ಷಕ್ಕೆ ಅದನ್ನು ಬಿಟ್ಟು ಕೊಟ್ಟರೆ ಆ ಕ್ಷೇತ್ರದಲ್ಲಿ ನಮ್ಮ ಪಕ್ಷ ಸ್ಪರ್ಧಿಸ ಬೇಕೆಂದು ನಿರ್ಣಯಿಸಿತು.

ಚುನಾವಣಾ ನಿಧಿಗೆ ಎಲ್ಲ ಪಾರ್ಟಿ ಘಟಕಗಳೂ ಉತ್ಸಾಹದಿಂದ ಧನ ಸಂಗ್ರಹ ಮಾಡಬೇಕೆಂದು ಕರೆಕೊಡಲಾಯಿತು.

ರಾಜ್ಯದ ಸ್ಟೈಪಂಡರಿ ನೌಕರರ ಪ್ರಶ್ನೆಯನ್ನು ಕೂಡಲೇ ಬಗೆಹರಿಸಬೇಕೆಂದೂ, ದಿನಗೂಲಿ ಕಾರ್ಮಿಕರನ್ನು

(8ನೇ ಪುಟ ನೋಡಿ)

ದೇಶದ ಸಮಗ್ರತೆ ಉಳಿಸಲು ಇ. ಎಂ. ಎಸ್. ಕರೆ

"ಇಂದಿರಾ ಗಾಂಧಿ ನಮ್ಮ ದೇಶದಲ್ಲಿ ಜಾತೀಯ ಮತ್ತು ಛಿದ್ರಕಾರಿ ಶಕ್ತಿಗಳಿಗೆಲ್ಲ ಯಾವ ರೀತಿ ಬೆಂಬಲ ನೀಡಿದರು, ತನ್ನ ಅಧಿಕಾರ ಭದ್ರಗೊಳಿಸುವ ಸಲುವಾಗಿ ಅವುಗಳು ಅಪಾಯಕಾರಿ ಎಂದು ತಿಳಿದೂ ಹೇಗೆ ಉಪಯೋಗ ಮಾಡಿಕೊಂಡರು, ಆ ಕಾರಣದಿಂದಾಗಿಯೇ ದೇಶದ ನಾನಾ ಭಾಗಗಳಲ್ಲಿ ಮುಖ್ಯವಾಗಿ ಪಂಜಾಬ್-ಅಸ್ಸಾಂಗಳಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಸಹಾಯದಿಂದ ದೇಶಕ್ಕೆ ಗಂಡಾಂತರ ಕಾರಿಯಾದ ಹಿಂದೂ—ಸಿಖ್ಖರೊಳಗೆ ದ್ವೇಷಾಸೂಯೆ ಹುಟ್ಟಿಸುವ ಗಂಡಾಂತರಕಾರಿ ಚಟುವಟಿಕೆಗಳು ಯಾವ ರೀತಿ ನಡೆದು ಬಂದವು, ಕೊನೆಗೆ ಆ ಶಕ್ತಿಗಳಿಂದಲೇ ತಾನು ಮರಣವನ್ನಪ್ಪಿದರು ಇವುಗಳನ್ನೆಲ್ಲ ನಾವು ಜನರಿಗೆ ತಿಳಿಸಿ ಹೇಳಿ, ದೇಶದ ಸಮಗ್ರತೆಯನ್ನುಳಿಸಲು ಕಾಂಗ್ರೆಯನ್ನು ಲೋಕ ಸಭೆ ಚುನಾವಣೆಯಲ್ಲಿ ಪೂರ್ಣ ಸೋಲಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾ. ಇ. ಎಂ. ಎಸ್. ನಂಬೂದಿರಿ ಪಾಡ್ ಅವರು ಕರೆ ಕೊಟ್ಟರು.

ಸಿ. ಪಿ. ಐ. [ಎಂ] ಬೆಂಗಳೂರು ಜಿಲ್ಲಾ ಸಮಿತಿ 20-11-84 ರಂದು ಏರ್ಪಡಿಸಿದ ಸಾರ್ವಜನಿಕ ಸಭೆಯಲ್ಲಿ ಅವರು ಭಾಷಣ ಮಾಡುತ್ತಿದ್ದರು. ಇ. ಎಂ. ಎಸ್. ಅವರು ಮತ್ತೂ ಹೀಗೆ ಹೇಳಿದರು.

ದೇಶ ಗಂಭೀರ ಪರಿಸ್ಥಿತಿಯನ್ನೆದುರಿಸುತ್ತಿರುವಾಗ ಈ ಲೋಕ ಸಭೆ ಚುನಾವಣೆ ನಡೆಯುತ್ತಿದೆ. ಇಂದಿರಾ ಗಾಂಧಿಯ ಹತ್ಯೆ ಹೇಗಾಯಿತು, ಯಾಕೆ ಹಾಗಾಯಿತು ಯಾರಿಂದಾಯಿತು ಎಂಬ ಪ್ರಶ್ನೆಗಳೆಲ್ಲ ಈ ಚುನಾವಣೆಯಲ್ಲಿ ಜನರು ಕೇಳುತ್ತಾರೆ. ತನ್ನ ರಕ್ಷಕದಳದವರಿಂದಲೇ ಆಕೆಯ ಕೊಲೆಯಾಯಿತು. ಇದು ಹೀಗ್ಯಾಕಾಯಿತೆಂಬುದನ್ನು ಕಾಂಗ್ರೆಸ್ಸಿನವರು ವಿವರಿಸಬೇಕು.

ತನ್ನನ್ನು ಆರಿಸಿ ತಂದರೆ "ಕೆಲಸ ಮಾಡುವ ಸರಕಾರವನ್ನು ಒದಗಿಸುತ್ತೇನೆ" ಎಂದ ಹೋದ ಚುನಾವಣೆಯಲ್ಲಿ ಇಂದಿರಾ ಗಾಂಧಿ ಹೇಳಿದ್ದರು. ಕೆಲಸ ಮಾಡುವ ಸರಕಾರವಿರುವಾಗ ಪಂಜಾಬ್ ಸಮಸ್ಯೆ ಯಾಕೆ ಬಗೆಹರಿದಿಲ್ಲ? ಆದರಿಂದಾಗಿಯೇ ಆಕೆಯ ಹತ್ಯೆಯಾದುದ್ದು ಯಾಕೆ? ಇದರ ಕುರಿತು ಕಾಂಗ್ರೆಸ್‌ನವರು ವಿವರಣೆ ನೀಡಬೇಕು. ಇಲ್ಲವಾದರೆ ಮತ ಕೇಳುವ ಹಕ್ಕು ಅವರಿಗಿಲ್ಲ.

ಇಂದಿರಾ ಗಾಂಧಿ ಕೊಲೆಯಾಗುವುದಕ್ಕೆ ಮೂರು ತಿಂಗಳ ಮುಂಚಿತವಾಗಿ ಸ್ವರ್ಣ ಮಂದಿರ ಶಸ್ತ್ರಾಸ್ತ್ರಗಳ ಸಂಗ್ರಹಾಲಯವಾಗಿತ್ತು. ಅಮೇರಿಕನ್ ಸಾಮ್ರಾಜ್ಯ ಶಾಹಿಗಳ ಸಹಾಯ ಪಡೆಯುವ ಸಿಖ್ ಭಯೋತ್ಪಾದಕರಿಂದ ತುಂಬಿತ್ತು. ದೇವಸ್ಥಾನದಲ್ಲಿ ಶಸ್ತ್ರಾಸ್ತ್ರಸಂಗ್ರಹ ಹೇಗಾಯಿತು, ಸಿಖ್ ಭಯೋತ್ಪಾದಕರಿಗೆ ಅಲ್ಲಿ ಆಶ್ರಯ ಹೇಗೆ ಸಿಕ್ಕಿತು. ಅದನ್ನು ತಡೆಯಲು "ಕೆಲಸ ಮಾಡುವ ಸರಕಾರ" ಏನು ಮಾಡಿತು ಎಂಬ ವಿಷಯ ಜನರಿಗೆ ಗೊತ್ತಾಗ ಬೇಕಾಗಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವನ್ನೊಳಗೊಂಡು ಎಲ್ಲ ವಿರೋಧ

(8ನೇ ಪುಟ ನೋಡಿ)

ಗ್ರಾಮ ಪ್ರದೇಶದ ಬೆಳವಣಿಗೆಯಲ್ಲಿ ಗೊಂದಲ
ತಲೆಯ ಮೇಲೆ ಮೂರು ಪ್ರಾಧಿಕಾರಗಳು

ನಗರ ಸಭೆ, ನಗರ ಕಾರ್ಪೊರೇಶನ್ ಗೊಳಪಟ್ಟಿರುವ ನಾಗರೀಕರು, ಮನೆಗಳನ್ನು ಹೊಂದಿದವರು, ಮನೆ ಕಟ್ಟುವವರೆಲ್ಲ ಮೂರು ಬೇರೆ ಬೇರೆ ಅಧಿಕಾರಿಗಳಿಗೆ 'ಸಲಾಂ' ಹೊಡೆಯಬೇಕಾಗಿದೆ.

ರಾಜ್ಯ ಪುನರ್ರಚನೆಯಾಗುವ ಮುಂಚೆ ಹಾಗೂ ಅನಂತರ ಕೆಲವು ವರ್ಷ ನಗರ ಸಭೆ, ನಗರ ಕಾರ್ಪೊರೇಶನ್ ಅಧಿಕಾರಿಗಳೇ ನಗರಗಳ ಅಭಿವೃದ್ಧಿಯ ಜವಾಬ್ದಾರರಾಗಿದ್ದರು. ಆಗ ಮನೆ ಕಟ್ಟಲು ನಕಾಶೆ ತೆಗೆಯುವ, ಅಪ್ಪಣೆ ಕೊಡುವ, ಆ ಪ್ರದೇಶದ ಯೋಜಿತ ಅಭಿವೃದ್ಧಿಗೊಳಿಸುವ ಸಂಪೂರ್ಣ ಅಧಿಕಾರ ಅವರಲ್ಲೇ ಆಗಿತ್ತು.

1965 ರಲ್ಲಿ ಕರ್ನಾಟಕ ನಗರ ಯೋಜನೆ ಕಾಯಿದೆ ಪಾಸಾಯಿತು. ಅನಂತರ ನಗರ ಅಭಿವೃದ್ಧಿ ಪ್ರಾಧಿಕಾರ ಕಾಯಿದೆ ಬಂತು. ರಾಜ್ಯದ ಎಲ್ಲಾ ನಗರ ಸಭೆ ಮತ್ತು ನಗರ ಕಾರ್ಪೊರೇಶನ್‌ಗಳ ಕಾರ್ಯಕ್ಷೇತ್ರದಲ್ಲಿ ಕಾಯಿದೆ ಇದ್ದರೂ ಕೂಡ ಹಲವಾರು ವರ್ಷ ಆ ಕಾಯಿದೆಗಳಿಗನುಸಾರ ಪ್ರಾಧಿಕಾರಗಳನ್ನು ರಚಿಸಿದ್ದಿಲ್ಲ. ಈಗ ನಗರ ಯೋಜನಾ ಸಮಿತಿ, ನಗರ ಅಭಿವೃದ್ಧಿ ಪ್ರಾಧಿಕಾರಗಳನ್ನು ನೇಮಿಸಲಾಗಿದೆ. ಅವುಗಳಲ್ಲಿ ಅಧಿಕಾರೇತರ ಸದಸ್ಯರೂ ಇರುತ್ತಾರೆ. ಆ ಪ್ರಾಧಿಕಾರಗಳ ಅಧ್ಯಕ್ಷರಾಗಿ ರಾಜಕೀಯ ಮುಖಂಡರನ್ನು ನೇಮಿಸಲಾಗುತ್ತಿದೆ.

ಒಂದು ನಗರದಲ್ಲಿ ಮನೆ ಕಟ್ಟಲಿಕ್ಕೆ ಸ್ಥಳ ಕೊಳ್ಳಲು, ಮನೆಯ ನಕಾಶೆ ತಯಾರಿಸಲು, ಅದಕ್ಕೆ ಅಪ್ಪಣೆ ಕೊಡಲು, ಮನೆಗಳು ಕಟ್ಟುವ ಪ್ರದೇಶದಲ್ಲಿ ನೀರು, ದೀಪ, ರಸ್ತೆಗಳನ್ನು ನಿರ್ಮಾಣ ಮಾಡಲು, ಅಭಿವೃದ್ಧಿಗೊಳಿಸಲು ಮೂರು ಅಧಿಕಾರಿಗಳ ಕೈವಾಡವಿರುತ್ತದೆ. ತಂತಮ್ಮ ಆಕ್ಟ್‌ಗಳಲ್ಲಿ ಮೂರೂ ಪ್ರಾಧಿಕಾರಗಳಿಗೆ ಒಂದಲ್ಲೊಂದು ಅಥವಾ ಎಲ್ಲ ಅಧಿಕಾರವೂ ಕೊಡಮಾಡಲ್ಪಟ್ಟಿದೆ. ಹೀಗಾಗಿ ಅವರೊಳಗೆ ಹೊಂದಾಣಿಕೆ ಇಲ್ಲದಾಗಿದೆ. ಜನರು ತೊಂದರೆ ಎದುರಿಸ ಬೇಕಾಗಿದೆ.

ಒಂದು ನಗರದ ಅಭಿವೃದ್ಧಿಗೆ ನಗರ ಸಭೆ, ನಗರ ಯೋಜನಾ ಪ್ರಾಧಿಕಾರ ಮತ್ತು ನಗರ ಅಭಿವೃದ್ಧಿ ಪ್ರಾಧಿಕಾರಗಳು ಬೇಕೇ ಎಂಬ ಪ್ರಶ್ನೆ. ಚುನಾವಣೆಯಲ್ಲಿ ಆರಿಸಿ ಬರುವ ನಗರ ಸಭೆ ಸದಸ್ಯರು, ನಗರದ ಅಭಿವೃದ್ಧಿಗೆ ಹೆಚ್ಚಿನ ಗಮನ ಕೊಡಲಾರದವರಾಗಿದ್ದಾರೆ, ಮತದಾರರ ಒತ್ತಡಕ್ಕೆ ಬಲಿಯಾಗಿ ಅಭಿವೃದ್ಧಿ ಯೋಜನೆಯನ್ನು ಕಡೆಗಣಿಸಿ ಸಿಕ್ಕಲ್ಲೆಲ್ಲ ಅಂಗಡಿ, ಕಟ್ಟಡಗಳಿಗೆ ಅವಕಾಶ ಮಾಡಿಕೊಡುತ್ತಾರೆ. ಅದ್ದರಿಂದ ಊರಿನ ಸೌಂದರ್ಯ, ಅಚ್ಚುಕಟ್ಟು, ಆರೋಗ್ಯಗಳನ್ನು ಕಾಪಾಡಿ ಊರಿನ ಬಡಾವಣೆಗಳನ್ನು ಯೋಜಿತ ರೀತಿಯಲ್ಲಿ ಕಟ್ಟಿಕೊಂಡು ಹೋಗಬೇಕಾದರೆ ನಗರ ಯೋಜನಾ ಪ್ರಾಧಿಕಾರ ಬೇಕೇ ಬೇಕು. ಹಾಗಾದರೆ ನಗರ ಅಭಿವೃದ್ಧಿ ಪ್ರಾಧಿಕಾರದ ಅವಶ್ಯಕತೆ ಇದೆಯೇ ? ಊರು ಬೆಳವಣಿಗೆಗಾಗಿ ಖಾಲಿ ಜಾಗ ಖರೀದಿಸಿ, ಯೋಜನಾ ಬದ್ಧವಾಗಿ ಬೆಳೆಸಲು ನಗರ ಅಭಿವೃದ್ಧಿ ಪ್ರಾಧಿಕಾರ ಬೇಕೆಂದು ಹೇಳುತ್ತಾರೆ. ಹಾಗಾದರೆ ಇವರಿಬ್ಬರೂ ನಗರ ಸಭೆಯ ಅಧಿಕಾರಗಳನ್ನು ಹಂಚಿಕೊಂಡು ನಗರ ಸಭೆಯನ್ನು ತಬ್ಬಲಿಗೊಳಿಸಿದಂತೆ ಆಗುವುದಿಲ್ಲವೇ? ಮೂರರಲ್ಲೂ ನಾಗರೀಕ ಪ್ರತಿನಿಧಿಗಳೇ ಇರುವುದರಿಂದ ವಶೀಲಿಬಾಜಿ, ಒತ್ತಡಗಳಿಂದಾಗಿ ಈ ಮೂರೂ ಪ್ರಾಧಿಕಾರಗಳೂ ತಮ್ಮ ಹಕ್ಕಿನ ಮಿತಿಯನ್ನು ಬದಿಗಿಟ್ಟು ಸಾಧ್ಯವಿದ್ದಷ್ಟು ಊರನ್ನು ವಿರೂಪಗೊಳಿಸುವಲ್ಲಿ ತೊಡಗಿದ್ದಾರೆ, ಅಥವಾ ನಿಜವಾಗಿಯೂ ಶಿಸ್ತುಬದ್ಧವಾಗಿ ಮನೆ ಕಟ್ಟಿಸಿಕೊಳ್ಳುವವರಿಗೆ, ರಿಪೇರಿ ಮಾಡಿಸಿಕೊಳ್ಳುವವರಿಗೆ, ತಮ್ಮ ಪ್ರದೇಶದ ಅಭಿವೃದ್ಧಿ ಪಡಿಸಿಕೊಳ್ಳುವವರಿಗೆ ಅಡ್ಡಿ ಅತಂಕ ಒಡ್ಡುತ್ತಿದ್ದಾರೆ. ಹೀಗಾಗಿ ಅತಿ ಕ್ರಮಣಗಳೂ, ನೆರೆಕರೆಯವರಿಗೆ ತೊಂದರೆ ಕೊಡುವ ಕಾರ್ಯಗಳೆಲ್ಲ ಯಾರ ಅಂಜಿಕೆಗಳಿಲ್ಲದೆ ಮುಂದೆ ಸಾಗಿವೆ.

ಕರ್ನಾಟಕ ರಾಜ್ಯದಲ್ಲಿ ಕಳೆದ ಕೆಲವು ವರ್ಷಗಳಿಂದ ತಮ್ಮ ಪಕ್ಷದಲ್ಲಿಯ ಕೆಲವರನ್ನು ಶಾಸಕರನ್ನಾಗಿ ಮಾಡಲು ಅಸಾಧ್ಯವಾದಾಗ ಅಂಥವರನ್ನು ತೃಪ್ತಿ ಪಡಿಸುವ ಉದ್ದೇಶದಿಂದ ನಗರ ಯೋಜನಾ ಸಮಿತಿಗಳನ್ನು ರಚಿಸಿ ಅಂಥವರನ್ನ ಆ ಸಮಿತಿಗಳಿಗೆ ಅಧ್ಯಕ್ಷರನ್ನಾಗಿ ನೇಮಿಸಲಾಗುತ್ತಿದೆ. ಸದ್ಯ ರಾಜ್ಯದಲ್ಲಿ ಅಂಥ 24 ಕಮಿಟಿಗಳಿರುತ್ತವೆ. ಅವುಗಳು ಕೆಲಸ ಮಾಡಿರುವ ಕೆಲಸಗಳನ್ನು ಪರಿಶೀಲಿಸಿದರೆ, ಈ ಕಮಿಟಿಗಳು ಅನಗತ್ಯ, ಅದರಿಂದ ಏನೂಮಹತ್ವದ ಕೆಲಸ ಕೂಡ ಸಾಧಿಸಲ್ಪಟ್ಟಿಲ್ಲೆಂದು ಕಂಡು ಬರುತ್ತದೆ. ಬಿಜಾಪುರದಲ್ಲಿ ಖಾಸಗಿ, ಸರಕಾರಿ ಸ್ಥಳಗಳಲ್ಲಿ ಯಾರ ಅಪ್ಪಣೆ, ನಕಾಶೆಗಳಿಲ್ಲದೆ ಕೆಲವು ಶ್ರೀಮಂತರು ಕಟ್ಟಡ, ಕಾರ್ಖಾನೆ ಕಟ್ಟಿರುವುದರ ಕುರಿತು ಯೋಜನಾ ಅಧಿಕಾರಿಗಳಿಗೆ ದೂರಿತ್ತಾಗ "ನಾವೇನು ಮಾಡಲು ಸಾಧ್ಯ"ವೆಂಬ ಅಸಹಾಯಕ ಉತ್ತರ ನೀಡಿದರು. ಸರಕಾರದಿಂದ ಪುಕ್ಕಟೆಯಾಗಿ ವೇತನಪಡೆಯುವ ನಿರುದ್ಯೋಗಿಗಳ ಸಂಘ ಯೋಜನಾ ಪ್ರಾಧಿಕಾರವೆಂದು ಹೇಳಿದರೆ ತಪ್ಪಾಗಲಾರದು.

ಬೆಂಗಳೂರು ನಗರದ ಅಭಿವೃದ್ಧಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವಿದೆ. ಅವರು ಭೂಮಿ ಕೊಂಡು ಕೊಂಡು ಯೋಜನೆಮಾಡಿ ನಗರ ಬಡಾವಣೆಯ ಕಾರ್ಯ ಮಾಡುತ್ತಿದ್ದಾರೆ. ಇತರ ಕಾರ್ಪೊರೇಷನ್ ಮತ್ತು ನಗರಗಳಲ್ಲಿಯೂ ಬಡಾವಣೆ ರೂಪಿಸುವ ದೃಷ್ಟಿಯಿಂದ ಅಭಿವೃದ್ಧಿ ಪ್ರಾಧಿಕಾರಗಳನ್ನು ನೇಮಿಸಿ ರಾಜಕೀಯ ಅಸಂತುಷ್ಟರನ್ನು ಅದರ ಅಧ್ಯಕ್ಷರನ್ನಾಗಿ ನೇಮಿಸಲಾಗುತ್ತಿದೆ.

ನನಗೆ ದೊರೆತ ವರದಿಗಳಂತೆ ಹಣದ ತೊಂದರೆಯಿಂದಾಗಿ ಈ ಪ್ರಾಧಿಕಾರಗಳು ಕಾರ್ಯ ಮಾಡಲುಅನಾನುಕೂಲವಾಗಿದೆಂದು ತಿಳಿದು ಬರುತ್ತದೆ.

ಈ ಬಂಡವಾಳಶಾಹಿ ಆಡಳಿತೆಯ ವ್ಯವಸ್ಥೆಯಲ್ಲಿ ಬಹಳಷ್ಟು ಕಮಿಟಿಗಳನ್ನೂ, ಪ್ರಾಧಿಕಾರಗಳನ್ನೂ ನೇಮಿಸುವುದರಿಂದ ಅಭಿವೃದ್ಧಿ ಕೆಲಸಗಳು ತುರ್ತುಗತಿಯಲ್ಲಿ ಮುಂದುವರಿಯಲು ಸಾಧ್ಯವಿಲ್ಲ. ಯಾಕೆಂದರೆ ಈಗಿನ ಕಾನೂನುಗನುಸಾರವಾಗಿ ಒಂದು ನಗರ ಅಭಿವೃದ್ಧಿ ಯೋಜನೆಗೆ ಮಂಜೂರಾತಿ ಸಿಗಬೇಕಾದರೆ ಅದು ಪ್ರಥಮವಾಗಿ ಹೊರಗಿನ ಅಭಿವೃದ್ಧಿ ಯೋಜನೆಯಾಗಿ ತಯಾರಿಸಲ್ಪಟ್ಟು, ಸಮಗ್ರ ಅಭಿವೃದ್ಧಿ ಯೋಜನೆಯಾಗಿ ಮಾರ್ಪಡಬೇಕು. ಅನಂತರ ಅದು ವಿಶೇಷ ನಗರ ಯೋಜನೆಗಳಾಗಿ ಪರಿವರ್ತಿಸಲ್ಪಡಬೇಕು. ಸದ್ಯ ಯೋಜನಾ ಅಧಿಕಾರಿಗಳು ಹೊರಗಿನ ಅಭಿವೃದ್ಧಿ ಯೋಜನೆಯನ್ನೇ ತಲ್ಪಲು ಸಾಧ್ಯವಾಗಿಲ್ಲ. ಅವುಗಳೆಲ್ಲ ಪ್ರಥಮ ಮತ್ತು ದ್ವಿತೀಯ ಹಂತದಲ್ಲೇ ಸಿಕ್ಕಿಕೊಂಡಿವೆ. ಹೀಗಾಗಿ ಈ ಪ್ರಾಧಿಕಾರಗಳ ಅವಶ್ಯಕತೆಗೆ ಸವಾಲೊಡ್ಡಿದಂತಾಗಿವೆ.

ಈ ಮುಂಚೆ ನಗರಸಭೆ—ನಗರ ಕಾರ್ಪೊರೇಷನ್‌ಗಳು ತಮ್ಮ ಅಧಿಕಾರದಿಂದ ಹೊಸ ಈ 2 ಪ್ರಾಧಿಕಾರಗಳ ಕೆಲಸ ನಿರ್ವಹಿಸುತ್ತಿದ್ದರು. ಅವರ ಕೆಲಸದಲ್ಲಿ ತಪ್ಪಿದ್ದರೂ ಕೂಡ ನಗರ ಸಭೆ ಮತ್ತು ಸರ್ಕಾರ ದೊಡನೆ ನೇರ ಸಂಪರ್ಕ ವಿದ್ದುದರಿಂದ ತಡವಿಲ್ಲದೆ ಕೆಲಸಗಳನ್ನು ಮಾಡಲು ಸಾಧ್ಯವಾಗುತ್ತಿತ್ತು. ಯೋಜನಾ ಅಧಿಕಾರ, ಅಭಿವೃದ್ಧಿ ಪ್ರಾಧಿಕಾರದ ಕೆಲಸಗಳು ಸಮಾಧಾನಕಾರಕವಾಗಿಲ್ಲೆಂದು ಗೊತ್ತಿದ್ದರೂ ಕೂಡ ಸರ್ಕಾರವಾಗಲೀ ನಗರ ಯೋಜನೆ ಅಧಿಕಾರಿಗಳಾಗಲೀ ಈ ಸಮಸ್ಯೆಯನ್ನು ಆಳವಾಗಿ ಅಭ್ಯಾಸ ಮಾಡಿ ಪರಿಹಾರ ಕಂಡುಹಿಡಿದಿಲ್ಲ.

ಯೋಜನಾ ಅಧಿಕಾರಿಗಳು ಯೋಜನೆ ತಯಾರಿಸಬೇಕು, ಅಭಿವೃದ್ಧಿ ಕೆಲಸಗಳನ್ನು ಅಭಿವೃದ್ಧಿ ಪ್ರಾಧಿಕಾರಗಳು ಮಾಡಬೇಕು, ನಗರ ಸಭೆಯವರು ರಿಪೇರಿ ಕೆಲಸ ಮಾಡಬೇಕು. ಇದು ಈಗಿನ ಕಾರ್ಯರೂಪ. ಬೆಂಗಳೂರಿನ ಅಭಿವೃದ್ಧಿ ಪ್ರಾಧಿಕಾರ ಯೋಜನೆ ಹಾಗೂ ಅಭಿವೃದ್ಧಿ ಕೆಲಸ ಮಾಡುತ್ತಿದೆ. ಹಾಗೆಯೇ ರಾಜ್ಯದ ಇತರೆಡೆಗಳಲ್ಲಿಯೂ ಯೋಜನಾ ಅಧಿಕಾರಿಗಳಾಗಲೀ, ಅಭಿವೃದ್ಧಿ ಮಂಡಳಿಗಳಾಗಲೀ ಬೆಂಗಳೂರು ಮಾದರಿಯಲ್ಲಿ ಕೆಲಸ ಮಾಡಬಹುದಲ್ಲ. ಸರ್ಕಾರ ಆ ರೀತಿಯ ತಿದ್ದುಪಡಿ ಮಾಡಿ ಅಭಿವೃದ್ಧಿ ಕಾರ್ಯದಲ್ಲುಂಟಾಗಿರುವ ಅಡೆತಡೆ ನಿವಾರಣೆ ಮಾಡಬಹುದಲ್ಲ. ಈ ಮೂರು ಅಧಿಕಾರಗಳಿಂದ ನಾಗರಿಕರಿಗಾಗುತ್ತಿರುವ ತೊಂದರೆಗಳನ್ನು ನಿವಾರಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದು ಅತ್ಯಗತ್ಯ.

—ಎನ್. ಕೆ. ಉಪಾಧ್ಯಾಯ

ರೈತ ಸಂಘದ ತರಬೇತಿ ಶಿಬಿರಗಳು

ಬೆಳ್ತಂಗಡಿ ತಾಲೂಕು

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನಲ್ಲಿ ಕಳಂಜ, ಉಜಿರೆ, ಕನ್ನಡಿ ಕಟ್ಟೆ ಮತ್ತು ಬಂದಾರು ಎಂಬಲ್ಲಿ ರೈತ ಸಂಘದ ಗ್ರಾಮ ಮಟ್ಟದ ಕಾರ್ಯಕರ್ತರುಗಳಿಗೆ ಒಂದೊಂದು ದಿನದ ತರಬೇತಿ ಶಿಬಿರಗಳನ್ನು ನಡೆಸಲಾಯಿತು. ಸುಮಾರು ಇಪ್ಪತ್ತು ಗ್ರಾಮಗಳಿಂದ ಕಾರ್ಯಕರ್ತರು ಭಾಗವಹಿಸಿದ್ದ ಈ ಶಿಬಿರಗಳಲ್ಲಿ ಒಟ್ಟು ನೂರ ಮೂವತ್ತು ಮಂದಿ ಪಾಲ್ಗೊಂಡರು. ಕಳಂಜದಲ್ಲಿ ಮುವತ್ತೈದು ಮತ್ತು ಉಜಿರೆಯಲ್ಲಿ ಇಪ್ಪತ್ತೈದು, ಕನ್ನಡಿ ಕಟ್ಟೆಯಲ್ಲಿ ಇಪ್ಪತ್ತೈದು ಮತ್ತು ಬಂದಾರುವಿನಲ್ಲಿ ನಲವತ್ತೈದು ಮಂದಿ ಭಾಗವಹಿಸಿದ್ದರು. ತರಬೇತಿ ಶಿಬಿರದ ಸಂದರ್ಭದಲ್ಲಿ ಎಡ ಹಾಗೂ ಪ್ರಗತಿಪರ ಸಾಹಿತ್ಯಗಳನ್ನು ಮಾರಾಟ ಮಾಡುವ ಮತ್ತು ಐಕ್ಯರಂಗಕ್ಕೆ ಚಂದಾದಾರರನ್ನು ಸೇರಿಸುವ ಕೆಲಸವೂ ನಡೆಯಿತು.

ಈ ಎಲ್ಲಾ ತರಬೇತಿ ಶಿಬಿರಗಳಲ್ಲೂ ಕಾಮ್ರೆಡ್ ಎಂ. ಕೆ. ಭಟ್ ಅವರು ಬದಲಾಗಿರುವ ಗ್ರಾಮೀಣ ಪರಿಸ್ಥಿತಿ, ರೈತ ಸಂಘಟನೆಯ ವರ್ಗನೆಲೆ, ಅಖಿಲ ಭಾರತ ಕಿಸಾನ್ ಸಭಾದ ಧೋರಣೆ, ಮತ್ತು ಅದು ಕೊಟ್ಟಿರುವ ಘೋಷಣೆಗಳು, ರೈತ ಸಂಘಟನೆಯನ್ನು ಕಟ್ಟುವ ರೀತಿ, ಕೃಷಿ ಕೂಲಿಗಾರ ಸಂಘಟನೆ, ಮತ್ತು ಹೋರಾಟ ಹಾಗೂ ಅನುಭವಗಳ ಕುರಿತು, ಸದ್ಯದ ರಾಜಕೀಯ ಪರಿಸ್ಥಿತಿ ಬಗ್ಗೆಯೂ ಪಾಠಗಳನ್ನು ನಡೆಸಿದರು. ತಾಲೂಕು ರೈತ ಸಂಘದ ಮುಖಂಡ ಕಾಮ್ರೆಡ್ ಬಿ. ವಿಷ್ಣು ಮೂರ್ತಿಯವರು ನಾಲ್ಕು ಶಿಬಿರಗಳಲ್ಲಿದ್ದು ಸಂಘಟನೆ ಮತ್ತು ಹಳ್ಳಿಯ ಬಡವರ ಸಮಸ್ಯೆಗಳ ಬಗ್ಗೆ ಮಾತನಾಡಿದರು. ತಾಲೂಕು ರೈತ ಸಂಘದ ಅಧ್ಯಕ್ಷ ಕಾ. ಚೆನ್ನಪ್ಪ ಪೂಜಾರಿ, ಪ್ರಧಾನ ಕಾರ್ಯದರ್ಶಿ ಕಾ. ಕೆ. ವಿ. ರಾವ್ ಮತ್ತು ಜತೆ ಕಾರ್ಯದರ್ಶಿ ಲಕ್ಷ್ಮಣ ಗೌಡ ಮೊದಲಾದವರು ಒಂದೆರಡು ಶಿಬಿರಗಳಲ್ಲಿ ಭಾಗವಹಿಸಿದ್ದರು. ಗ್ರಾಮ ಮಟ್ಟದಿಂದಲೇ ಸಂಘಟನೆಯನ್ನು ಕಟ್ಟಿ ಬೆಳೆಸಿ ತಾಲೂಕಿನಲ್ಲಿ ಪ್ರಬಲ ರೈತ ಸಂಘಟನೆ ಕಟ್ಟಬೇಕೆಂಬ ಅಭಿಪ್ರಾಯ ಎಲ್ಲೆಡೆಗಳಲ್ಲೂ ಕಂಡು ಬಂದಿದೆ.

ಮುಂಡೂರು

ದ. ಕ. ಜಿಲ್ಲೆಯ ಮತ್ತೊಂದು ತಾಲೂಕಿನ ಮುಂಡೂರು ಎಂಬಲ್ಲಿ ಮುಂಡೂರು ಮತ್ತು ಶಾಂತಿಗೋಡು ಗ್ರಾಮಗಳ ಸುಮಾರು ಇಪ್ಪತ್ತೈದು ಮಂದಿ ಕಾರ್ಯಕರ್ತರಿಗೆ ಒಂದು ದಿನದ ತರಬೇತಿ ಶಿಬಿರ ನಡೆಯಿತು. ಹಳ್ಳಿಯ ಬಡವರ ಪರಿಸ್ಥಿತಿ ಹಾಗೂ ರೈತ ಸಂಘಟನೆಗೆ ಸಂಬಂಧಪಟ್ಟ ಪಾಠಗಳನ್ನು ಕಾಮ್ರೆಡ್ ಎಂ.ಕೆ. ಭಟ್ ಮಾಡಿದರು ತಾಲೂಕು ರೈತ ಕಾರ್ಮಿಕ ಮುಖಂಡ ಕಾ. ಬಿ. ರಾಮಕೃಷ್ಣ ಉಪಸ್ಥಿತರಿದ್ದು ಸಂಘಟನೆಗೆ ಸಂಬಂಧಿಸಿ ಮಾತನಾಡಿದರು. ಸಾಹಿತ್ಯ ಮಾರಾಟ ಮತ್ತು ಐಕ್ಯರಂಗಕ್ಕೆ ಚಂದಾದಾರರನ್ನು ಸೇರಿಸುವ ಕೆಲಸವೂ ಇದೇ ಸಂದರ್ಭದಲ್ಲಿ ನಡೆಯಿತು.

ಸಂತಾಪ ಸೂಚನೆ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಹಿತೈಷಿ ಮತ್ತು ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಕಾರ್ಯಕರ್ತರಾಗಿದ್ದ ದೇಶಿಬೈಲ್ ಕೊಂಚಾಡಿಯ ಕಾಮ್ರೆಡ್ ಸುಬ್ಬಣ್ಣನವರು ತಾರೀಕು 10-10-1984 ರಂದು ತಮ್ಮ 75ನೇ ವರ್ಷ ವಯಸ್ಸಿನಲ್ಲಿ ನಿಧನ ಹೊಂದಿರುವರು. ಶ್ರೀಯುತರ ನಿಧನಕ್ಕೆ ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘವು ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿದೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರಾದಯೆಯ್ಯಾಡಿಯ ಕಾಮ್ರೆಡ್ ಭಾಸ್ಕರ ರವರ ತಂದೆ ಕುಂಞ್ಞ ರಾಮಣ್ಣನವರು ತಾರೀಕು 16-10-1934ರಂದು ತಮ್ಮ 65ನೇ ವರ್ಷ ಪ್ರಾಯದಲ್ಲಿ ನಿಧನ ಹೊಂದಿರುವರು. ಶ್ರೀಯುತರ ನಿಧನಕ್ಕೆ ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘವು ಶ್ರದ್ಧಾಂಜಲಿಯನ್ನು ಅರ್ಪಿಸಿದೆ.

ಕಾ|| ಇ. ಎಂ. ಎಸ್. ಆರೋಪ

ದಿಲ್ಲಿ ಹಿಂಸಾಕಾಂಡದಲ್ಲಿ ಕಾಂಗ್ರೆ ಹಸ್ತ

ಇಂದಿರಾ ಗಾಂಧಿಯವರ ಕೊಲೆಯಾದ ಕೂಡಲೇ ಆ ದುರ್ಘಟನೆಗೆ ಆಶ್ಚರ್ಯ ಮತ್ತು ಶೋಕ ಸೂಚಿಸುವಲ್ಲಿ ಹಾಗೆಯೇ ಇಂಥ ಅಮಾನುಷ ಘಟನೆಗೆ ಕಾರಣೀಭೂತರಾದವರನ್ನು ಖಂಡಿಸುವುದರಲ್ಲಿ ನಮ್ಮ ಪಕ್ಷ ಇಡೀ ದೇಶದ ಜೊತೆ ಸೇರಿಕೊಂಡಿತ್ತು. ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಕ್ಷದ ಪ್ರಧಾನ ಕಾರ್ಯದರ್ಶಿ ಇ ಎಂ ಎಸ್ ನಂಬೂದಿರಿಪಾಡ್ ಅವರು ನ.19 ರಂದು ಬೆಂಗಳೂರಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಅವರು ಮತ್ತೂ ಹೇಳಿದ್ದೇನೆಂದರೆ—

ಇದಕ್ಕೆ ಕಾರಣೀ ಭೂತರಾದವರೇ ಕೊಲೆಯ ನಂತರ ನಡೆಸಿದ ಜಾತೀಯ ದೌರ್ಜನ್ಯದ ಕುರಿತು ನಾವು ಚಿಂತೆಗೊಳಗಾಗಿದ್ದೆವು. ಇಂಥ ವಿಷವನ್ನು ಇನ್ನೂ ಹೆಚ್ಚು ಹಬ್ಬಿಕೊಳ್ಳಲಿಕ್ಕೆ ಅವಕಾಶ ಮಾಡಿ ಕೊಡಬಾರದೆಂದೂ ಪರಿಸ್ಥಿತಿಯನ್ನು ಸ್ಥಿಮಿತದಲ್ಲಿ ಕೂಡಲೆ ತರಬೇಕಾಗಿದೆಂದೂ ನಾವು ಅಪೇಕ್ಷಿಸಿದ್ದೆವು.

ದಿಲ್ಲಿಯ ಇಡೀ ಆಡಳಿತ ಸಂಪೂರ್ಣ ಕುಸಿದು ಬಿದ್ದಿರುವುದನ್ನು ನಾವು ಕಂಡಿದ್ದೆವು. ಸಮಾಜ ದ್ರೋಹಿಗಳ ವಿರುದ್ಧ ಕ್ರಮಕೈಗೊಳ್ಳುವುದರಲ್ಲಿ ಮೇಲ್ದರ್ಜೆಯ ಪೋಲೀಸರೂ, ಅಧಿಕಾರಿಗಳೂ ಸಂಪೂರ್ಣ ವಿಫಲಗೊಂಡಿದ್ದಲ್ಲದೆ, ಕೊಲೆ, ಸುಲಿಗೆ ಬೆಂಕಿ ಹಚ್ಚುವಂಥ ಹೀನಾಯ ಕೃತ್ಯಗಳಲ್ಲಿ ಇವರೆಲ್ಲರ ಆಂತರಿಕ ಕೈವಾಡವಿತ್ತೆಂಬುದು ಸ್ಪಷ್ಟ ಕಂಡು ಬರುತ್ತಿತ್ತು.

ಇಂಥ ಪರಿಸ್ಥಿತಿಯಲ್ಲಿ ಕೊಲೆಯಾದ ಪ್ರಧಾನ ಮಂತ್ರಿಯವರ ಸ್ಥಾನದಲ್ಲಿ ಯಾರನ್ನು ನೇಮಿಸಲಾಗುವುದು ಎಂಬ ವಿಚಾರದಲ್ಲಿ ನಮ್ಮ ಕೆಲವು ಮಿತ್ರರು ಊಹಾಪೋಹ ಮಾಡುವುದು ಸರಿಯಲ್ಲೆಂದು ನಾವು ಭಾವಿಸಿದೆವು. ಅಂಥ ಪರಿಸ್ಥಿತಿಯಲ್ಲಿ ಸಮಾಜ ದ್ರೋಹಿ ಶಕ್ತಿಗಳನ್ನೂ, ತಪ್ಪು ಮಾಡುವ ಅಧಿಕಾರಿಗಳನ್ನು ಹಿಡಿತದಲ್ಲಿಟ್ಟು, ಜನರನ್ನು ರಕ್ಷಿಸಲು ಶಕ್ತಿಯುಳ್ಳಂಥ ಬಲಿಷ್ಠ ಸರಕಾರದ ಅವಶ್ಯಕತೆಯಿತ್ತು. ವಿರೋಧ ಪಕ್ಷದಲ್ಲಿಯ ಇತರ ಮಿತ್ರರೊಡನೆ ನಾವು ಸೇರಿಕೊಂಡು, ಹೊಸ ಪ್ರಧಾನ ಮಂತ್ರಿಯನ್ನು ಭೇಟಿ ಮಾಡಿ, ಪರಿಸ್ಥಿತಿಯನ್ನು ಹಿಡಿತದಲ್ಲಿಟ್ಟುಕೊಂಡು, ಜನ ಜೀವನ ಸುಗಮಗೊಳ್ಳುವಂತೆ ಮಾಡಲು ಕೆಲವು ಸೂಚನೆಗಳನ್ನಿತ್ತು ಸಹಕರಿಸಿದೆವು.

ದಿಲ್ಲಿಯಲ್ಲಿ ಗಲಭೆಗಳಾದ ಪ್ರದೇಶಗಳಿಗೆ ನಾವು ಸಂದರ್ಶನವಿತ್ತಾಗ, ಅಲ್ಲಿ ಕಷ್ಟಕ್ಕೊಳಗಾದ ಜನರಿಂದಲೇ ನಮಗೆ ತಿಳಿದು ಬಂದ ವಿಷಯವೇನೆಂದರೆ, ತಪ್ಪು ದಾರಿಗಿಳಿದ ಅಧಿಕಾರಿಗಳು ಮಾತ್ರವಲ್ಲದೆ ಆಳುವ ಪಕ್ಷದ ಸ್ಥಳೀಯ ಮುಖಂಡರು ಸಮಾಜ ವಿರೋಧಿ ಕೃತಿಗಳನ್ನು ಸಂಘಟಿಸುವುದರಲ್ಲಿ ಭಾಗಿದಾರರಾಗಿದ್ದರು. ದಿಲ್ಲಿಯ ಕೆಲವು ಲೋಕ ಸಭೆ ಸದಸ್ಯರನ್ನೊಳಗೊಂಡು ಸ್ಥಳೀಯ ಕಾಂಗ್ರೆ ಮುಖಂಡರು ಅಂಥ ಅಮಾನುಷ ಕೃತ್ಯಗಳಲ್ಲಿ ಭಾಗವಹಿಸಿದ ಕುರಿತು ನಿರ್ದಿಷ್ಟ ಉದಾಹರಣೆಗಳನ್ನು ನಾವು ಪ್ರಧಾನ ಮಂತ್ರಿಯವರಿಗೆ ತಿಳಿಸಿದ್ದೆವು.

ನಮ್ಮ ಪಕ್ಷದ ದಿಲ್ಲಿ ರಾಜ್ಯ ಸಮಿತಿಯು ತಾನು ಸಲ್ಲಿಸಿದ ಮನವಿಯಲ್ಲಿ ಕೊಲೆ ಮಾಡಲ್ಪಟ್ಟವರ ಹೆಸರುಗಳನ್ನೂ, ಈ ಹತ್ಯಾಕಾಂಡದಲ್ಲಿ ಕೈವಾಡವಿದ್ದ ಆಳುವ ಪಕ್ಷದ ಮುಖಂಡರ ಹೆಸರುಗಳನ್ನೂ ಸೇರಿಸಲಾಗಿತ್ತು. ವಿರೋಧ ಪಕ್ಷದವರು ಯಾರಾದರೂ ಇಂಥ ಕೃತಿಯಲ್ಲಿ ಭಾಗಿದಾರರಾಗಿದ್ದರೆ ಅಂಥವರನ್ನೂ ನಾವು ರಕ್ಷಿಸುವುದಿಲ್ಲ ಅವರ ಮೇಲೂ ಕ್ರಮ ಕೈಗೊಳ್ಳಬಹುದೆಂದು ನಾನು ಪ್ರಧಾನ ಮಂತ್ರಿಯವರಿಗೆ ತಿಳಿಸಿದ್ದೆ. ಅವರು ಯಾರೇ ಇರಲಿ ಅಂಥ ಘಾತುಕ ಚಟುವಟಿಕೆಗಳಲ್ಲಿ ತೊಡಗಿದವರ ವಿರುದ್ಧ ಉಗ್ರ ಕ್ರಮ ಕೈಗೊಳ್ಳುವ ಅಗತ್ಯತೆ ಕುರಿತು ನಾವು ಅವರಿಗೆ ಮನದಟ್ಟು ಮಾಡಿದೆವು. ಅಂಥ ಕ್ರಮ ಕೈಗೊಳ್ಳುವುದು ಪ್ರಧಾನ ಮಂತ್ರಿಯವರ ಜವಾಬ್ದಾರಿ. ಆದರೆ ಸ್ಥಳೀಯ ಕಾಂಗ್ರೆ ಮುಖಂಡರೂ ಕಾರ್ಯಕರ್ತರು ಅಧಿಕಾರಿಗಳ ಮೇಲೆ ಯಾವುವೇ ರೀತಿಯ ಒತ್ತಡ ತರಲಾರದಂತೆ ನೋಡಿಕೊಳ್ಳಬೇಕೆಂದು ನಾನು ಅವರಿಗೆ ಹೇಳಿದ್ದೆ.

ಪರಿಸ್ಥಿತಿಯ ಲಾಭ ಪಡೆಯಲು ನನ್ನ ಪಕ್ಷ ಯಾವುದೇ ರೀತಿಯಲ್ಲೂ ಪ್ರಯತ್ನಿಸಿಲ್ಲೆಂಬುದನ್ನು ತೋರಿಸಿ ಕೊಡಲು ನಾನು ಈ ಮೇಲಿನಂಶವನ್ನೆಲ್ಲ ವಿವರಿಸಿದ್ದೇನೆ. ಪರಿಸ್ಥಿತಿಯನ್ನು ಹಿಡಿತದಲ್ಲಿ ತರಲಿಕ್ಕೆ ನಾವು ಸರ್ಕಾರಕ್ಕೆ ಎಲ್ಲ ತರದ ಸಹಕಾರ ನೀಡಿದೆವು. ಆದರೆ ಆಳುವ ಪಕ್ಷ ಭಾರತದ ಪ್ರಧಾನ ಮಂತ್ರಿಯವರ ಕೊಲೆಯಿಂದುಂಟಾದ ಪರಿಸ್ಥಿತಿಯ ಲಾಭ ಪಡೆಯಲು ಪ್ರಯತ್ನಿಸುತ್ತಿರುವುದನ್ನು ಕಂಡು ನನಗೆ ಖೇದ ಉಂಟಾಗಿದೆ. ಕಾಂಗ್ರೆಗೆ ಮತ ನೀಡುವುದರ ಮೂಲಕವೇ ಹತ್ಯೆಗೊಳಗಾದ ಪ್ರಧಾನ ಮಂತ್ರಿಯವರಿಗೆ ಗೌರವ ಸಲ್ಲಿಸಿದಂತಾಗುತ್ತದೆಂಬ ರೀತಿಯಲ್ಲಿ ಪ್ರಚಾರ ಮಾಡಲಾಗುತ್ತಿದೆ. ಈ ಹಿಂದಿನ ಚುನಾವಣೆಗಳಲ್ಲಿ ಜೀವಂತ ಇಂದಿರಾ ಗಾಂಧಿಯವರು ಕಾಂಗ್ರೆ ಪಕ್ಷಕ್ಕೆ ಮತಗಳಿಕೆಯ ಸಾಧನವಾಗಿದ್ದರು; ಇಂದಿನ ಚುನಾವಣೆಯಲ್ಲಿ ದಿ. ಇಂದಿರಾಗಾಂಧಿಯವರ ಹತ್ಯೆಯನ್ನು ಮತ ಕೂಡಿಸುವ ಸಾಧನವನ್ನಾಗಿ ಉಪಯೋಗ ಮಾಡಿಕೊಳ್ಳುತ್ತಿದೆ ಆಳುವ ಕಾಂಗ್ರೆ ಪಕ್ಷದಿಂದ.

ಆ ಕಾರಣದಿಂದಲೇ ಇಂದಿರಾಗಾಂಧಿಯವರ ಹತ್ಯೆಯಾದ ಕೆಲವೇ ದಿವಸಗಳಲ್ಲಿಯೇ, 1966ರಿಂದಲೂ ಇಂದಿರಾ ಗಾಂಧಿಯ ಹಾಗೆಯೇ ಆಕೆಯ ಮುಂಚೆ ಅಧಿಕಾರದಲ್ಲಿದ್ದ ಇನ್ನೂ ಇಬ್ಬರ ಆಡಳಿತೆಯಲ್ಲಿಯ ಧೋರಣೆಗಳನ್ನು ತೀವ್ರ ಟೀಕೆ ಮಾಡಬೇಕಾಗಿ ಬಂದಿರುವುದು ದುರದೃಷ್ಟಕರ.

ಹಿಂದೂ ಮತ್ತು ಸಿಖ್ಖರೊಳಗೆ ಭಿನ್ನಾಭಿಪ್ರಾಯ ಉಂಟಾಗಿ, ಅದರಿಂದಾಗಿ ಪ್ರಧಾನ ಮಂತ್ರಿಯವರ ಕೊಲೆ ಮತ್ತು ಅಮಾನುಷ ರೀತಿಯ ದಂಗೆ, ಸಾಮೂಹಿಕ ಲೂಟಿ, ಜೀವಂತ ದಹನಗಳಿಗೆಲ್ಲ ಮೂಲ ಕಾರಣ ಇಂದಿರಾ ಗಾಂಧಿಯಸರ್ಕಾರ, ಹಾಗೆಯೇ ಆಕೆಯ ಪಕ್ಷ ಅನುಸರಿಸಿಕೊಂಡು ಬಂದಂಥಾ ತಪ್ಪು ಧೋರಣೆಗಳೆಂಬುದನ್ನು ನಾವು ಮತದಾರರಿಗೆ ತಿಳಿಸಲೇ ಬೇಕಾಗುತ್ತದೆ.

ನಮ್ಮ ಪ್ರಥಮ ಪ್ರಧಾನ ಮಂತ್ರಿಯಾಗಿದ್ದ ಜವಹರಲಾಲ್ ನೆಹರು ಪ್ರಾರಂಭಿಸಿದ ಧೋರಣೆಯನ್ನೆ ಲಾಲ್ ಬಹದೂರ್ ಶಾಸ್ತ್ರಿ ಮತ್ತು ಇಂದಿರಾ ಗಾಂಧಿ ಅನುಸರಿಸುತ್ತ ಬಂದಿರುವರೆಂದು ನಾವು ಹೇಳಬೇಕಾಗುತ್ತದೆ.

ಈ ರೀತಿ ಪಂಡಿತ ನೆಹರೂರವರಿಂದ ಹಿಡಿದು ಇಂದಿರಾ ಗಾಂಧಿಯವರೆಗಿನ ಧೋರಣೆಗಳನ್ನು ನಾವು ಟೀಕಿಸುವಾಗ, ಸಾಮ್ರಾಜ್ಯಶಾಹಿಗಳನ್ನು ವಿರೋಧಿಸಲು ಇತರ ಮೂರನೇ ಜಗತ್ತಿನ ರಾಷ್ಟ್ರಗಳೊಡನೆ ಸೇರಿಕೊಂಡಿರುವುದಕ್ಕೆ ಕಾಂಗ್ರೆಸ್ ಪ್ರಧಾನ ಮಂತ್ರಿಗಳ ಪಾತ್ರವನ್ನು ನಾವು ಪ್ರಶಂಸಿಸುವುದನ್ನು ನಿರಾಕರಿಸುವುದಿಲ್ಲ. ಇಂಥ ಸಾಮ್ರಾಜ್ಯಶಾಹಿ ವಿರೋಧಿ ಧೋರಣೆಯನ್ನು ದೃಢ ನಿರ್ಧಾರದಿಂದ ಅನುಸರಿಸಿಕೊಂಡು ಬಂದ ಕಾರಣ ದಿಂದಲೇ ಆ ಶಕ್ತಿಗಳು, ಇಂದಿರಾ ಗಾಂಧಿಯ ಕೊಲೆ ಮಾಡಲು ಕೊಲೆಗಡುಕರನ್ನು ಕಳುಹಿಸಿ ಕೊಟ್ಟಿದ್ದಾರೆ. ಈ ವಿಷಯದಲ್ಲಿ ನಾವು ಕಾಂಗ್ರೆಸ್ ಸರ್ಕಾರದ ಧೋರಣೆಯ ಪ್ರಶಂಸೆ ಮಾಡುವಾಗ, ದೇಶದ ಆಡಳಿತೆಯನ್ನು ಜನತಾ ವಿರೋಧಿ ಸರ್ವಾಧಿಕಾರಿ ರೀತಿಯಲ್ಲಿ ನಡೆಸಿಕೊಂಡು ಬಂದಿರುವುದರ ವಿರುದ್ಧ ನಮ್ಮ ಹೋರಾಟ ದೃಢವಾಗಿ ಮುಂದುವರಿಯುವುದು. ಆ ಕಾರಣದಿಂದಲೇ ಮುಂಬರುವ ಲೋಕ ಸಭೆ ಚುನಾವಣೆಯಲ್ಲಿ ರಾಜೀವ್ ಗಾಂಧಿಯ ನೇತೃತ್ವದಲ್ಲಿರುವ ಕಾಂಗ್ರೆಸ್ಸನ್ನು ಸೋಲಿಸಬೇಕೆಂಬ ಕರೆಯನ್ನು ಪಾರ್ಟಿಯ ಕೇಂದ್ರ ಸಮಿತಿ ಮತದಾರರಿಗೆ ನೀಡಿದೆ. ○

ಸುಳ್ಯದಲ್ಲಿ ಬೃಹತ್ ಪ್ರತಿಭಟನಾ ಸಭೆ

ಕಾಂಗ್ರೆ ಬೆಂಬಲ ಪಡೆದಿರುವ ಇಂಟೆಕ್ ಯೂನಿಯನ್ನಿಗೆ ಸೇರಿದವರು ದ. ಕ. ಜಿಲ್ಲೆಯ ಸುಳ್ಯದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಛೇರಿಯ ಮೇಲೆ ನಡೆಸಿದ್ದ ಗೂಂಡಾ ಧಾಳಿಯ [ಇದರ ವಿವರ ಈ ಹಿಂದೆ ಪ್ರಕಟವಾಗಿದೆ] ವಿರುದ್ಧ ಆಕ್ಟೋಬರ್ 28 ರಂದು ಸುಳ್ಯದಲ್ಲಿ ಭಾರೀ ಪ್ರತಿಭಟನಾ ಕಾರ್ಯಕ್ರಮ ಜರುಗಿತು. ತಾಲೂಕಿನ ಮೂಲೆ ಮೂಲೆಗಳಿಂದ ಕಾಲ್ನಡಿಗೆಯಲ್ಲೇ ಮೆರವಣಿಗೆಯಲ್ಲಿ ಬಂದ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರನ್ನೊಳಗೊಂಡಿದ್ದ ಎಲ್ಲಾ ಮೆರವಣಿಗೆಗಳೂ ಒಂದುಗೂಡಿ ಅಂದು ಮಧ್ಯಾಹ್ನ ಸುಮಾರು ಎರಡು ಸಹಸ್ರ ಜನರಿಂದ ಕೂಡಿದ ಬೃಹತ್ ಮೆರವಣಿಗೆಯು ಸುಳ್ಯ ಪೇಟೆಯ ಪ್ರಮುಖ ಬೀದಿಗಳಲ್ಲಿ ಸುತ್ತಾಡಿತು.

ಕೊನೆಗೆ ಮೆರವಣಿಗೆಯಲ್ಲಿ ಬಂದ ಜನರೆಲ್ಲಾ ರಥ ಬೀದಿಯಲ್ಲಿ ಸೇರಿ ಕಾಮ್ರೆಡ್ ಎಂ. ಕೆ. ಭಟ್ ಅವರ ಅಧ್ಯಕ್ಷತೆಯಲ್ಲಿ ಪ್ರತಿಭಟನಾ ಸಭೆ ನಡೆಯಿತು. ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ. ಕೆ. ಆರ್. ಶ್ರಿಯಾನ್ ಮತ್ತು ಸಿ. ಐ ಟಿ. ಯು. ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಕಾ. ಮೂಸಬ್ಬ ಭಾಗವಹಿಸಿ ಭಾಷಣ ಮಾಡಿದರು. ಕಾಂಗ್ರೆಯವರಿಂದ ನಡೆದ ಗೂಂಡಾ ಧಾಳಿಯನ್ನು ಖಂಡಿಸಿದ ಭಾಷಣಕಾರರು ದುಡಿಯುವ ವರ್ಗವು ಒಂದಾಗಿ ಇದನ್ನು ಎದುರಿಸುವುದು ಎಂದರು. ಕಾಂಗ್ರೆಯ ಒಡೆದು ಆಳುವ ನೀತಿಯನ್ನು ವಿವರಿಸಿದ ಭಾಷಣಕಾರರೆಲ್ಲರೂ ದೇಶದ ಸಮಗ್ರತೆ, ಹಾಗೂ ಜನತೆಯ ಐಕ್ಯತೆಯನ್ನು ಕಾಯಲು ದುಡಿಯುವ ವರ್ಗ ಮುಂದಾಗಲು ಕರೆ ಇತ್ತರು. ಸಭೆ ಪ್ರಾರಂಭದಲ್ಲಿ ಕಾ. ಮೋನಪ್ಪ ಗೌಡ ಸ್ವಾಗತಿಸಿದರು. ಕೊನೆಗೆ ಕಾ. ಭಾಸ್ಕರ್ ವಂದನಾರ್ಪಣೆ ಮಾಡಿದರು. ಅಂದು ವಾತಾವರಣವು ಬಹಳ ಗಂಭೀರವಾಗಿದ್ದು ಪೋಲೀಸರು ವಿಶೇಷ ಬಂದೋಬಸ್ತು ವ್ಯವಸ್ಥೆ ಮಾಡಿದ್ದರು. ಏನೇನೂ ಅಹಿತ ಘಟನೆ ನಡೆಯದಿದ್ದು ಕಾರ್ಯಕ್ರಮ ಬಹಳ ಶಿಸ್ತು ಮತ್ತು ಸಂಯಮದಿಂದ ಜರುಗಿದ್ದಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತ ಪಡಿಸಿರುವರು. ○

ಕೊಡಗು ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯಾಟ

ದಿನಾಂಕ 0-11-1984 ರಂದು ವೀರಾಜಪೇಟೆಯ ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ[ಡಿ. ವೈ. ಎಫ್. ಐ.] ವತಿಯಿಂದ ವೀರಾಜಪೇಟೆಯ ಭಗತ್‌ಸಿಂಗ್ ಮೈದಾನದಲ್ಲಿ (ತಾಲೂಕು ಮೈದಾನ) ನಡೆದ ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯಾಟವನ್ನು ರಾಜ್ಯದ ಯುವ ಜನತಾ ಕಾರ್ಯದರ್ಶಿ ಹಾಗೂ ಗೋಣಿಕೊಪ್ಪಲು ಪುರಸಭಾ ಸದಸ್ಯರಾದ ಶ್ರೀ ವಿ. ಎ. ವೆಂಕಟೇಶ್‌ರವರು ನೆರವೇರಿಸಿದರು.

ಪಂದ್ಯಾಟದಲ್ಲಿ ಜಿಲ್ಲೆಯ ಒಟ್ಟು ಹದಿನಾಲ್ಕು ತಂಡಗಳು ಭಾಗವಹಿಸಿದ್ದು, ಅತ್ಯುತ್ತಮ ಪ್ರದರ್ಶನವನ್ನು ನೀಡಿದರು. ದಿನಾಂಕ 11-11-84ರಂದು ನಡೆದ ಅಂತಿಮ ಪಂದ್ಯಾಟದಲ್ಲಿ ಕೂಡಿಗೆಯ ಗೋಲ್ಡನ್ ಈಗಲ್ಸ್ ಮೊದಲನೇ ಬಹುಮಾನವನ್ನು ಮತ್ತು ಎರಡನೆಯ ಬಹುಮಾನವನ್ನು ವೀರಾಜಪೇಟೆಯ ಯಂಗ್ ಚಾಲೆಂಜರ್ಸ್ ತಂಡಗಳು ಪಡೆದು ಕೊಂಡವು.

ಸಮಾರಂಭದ ಅಧ್ಯಕ್ಷತೆಯನ್ನು ಡಿ. ವೈ. ಎಫ್. ಐ. ನ ರಾಜ್ಯ ಸಮಿತಿಯ ಅಧ್ಯಕ್ಷರಾದ ಕಾ|| ಮಹಾಬಲ ವಡೇರ ಹೋಬಳಿಯವರು ವಹಿಸಿದ್ದರು.

ವೀರಾಜಪೇಟೆ ಕಾವೇರಿ ಮಹಿಳಾ ಕಾಲೇಜಿನ ಕ್ರೀಡಾಧ್ಯಾಪಕಿ ಕು: ಮೇಕತಂಡ ದೇಚಮ್ಮನವರು ವಿಜೇತರಿಗೆ ಬಹುಮಾನ ವಿತರಣೆ ಮಾಡಿದರು.

ಡಿ. ವೈ. ಎಫ್. ಐ. ನ ರಾಜ್ಯ ಸಮಿತಿಯ ಸಹ ಕಾರ್ಯದರ್ಶಿ ಕಾ|| ಜಯರಾಂರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಪ್ರಾರಂಭದಲ್ಲಿ ಡಿ. ವೈ. ಎಫ್. ಐ. ನ ಜಿಲ್ಲಾ ಸಂಚಾಲಕ ಸ್ಟ್ಯಾನ್ಲಿ ವಾಜ್ ಸ್ವಾಗತಿಸಿದರು. ಪಿ. ಓ. ಜೋಸೆಫ್ ಪಂದ್ಯಾಟದ ಕ್ರೀಡಾ ವರದಿಯನ್ನು ನೀಡಿದರು.

ಕರ್ನಾಟಕದ ರಾಜಕೀಯದಲ್ಲಾದ ಕೆಲವು ಬದಲಾವಣೆಗಳು

– ಪಿ. ರಾಮಚಂದ್ರರಾವ್

ಜನವರಿ 5,1983 ರಂದು ಕರ್ನಾಟಕದಲ್ಲಿ ಚುನಾವಣೆಗಳು ನಡೆದು ಗುಂಡೂರಾಯರ ಕಾಂಗ್ರೆಸ್ (ಐ) ಸರಕಾರವು ಬಿದ್ದುಹೋಗಿ ಅದರ ಸ್ಥಾನದಲ್ಲಿ ರಾಮಕೃಷ್ಣ ಹೆಗ್ಡೆಯವರ ಜನತಾ ಸರಕಾರವು ಅಧಿಕಾರಕ್ಕೆ ಬಂತಷ್ಟೆ. ಅನಂತರ ರಾಜ್ಯದ ರಾಜಕೀಯದಲ್ಲಿ ನಡೆದ ಕೆಲವು ಬದಲಾವಣೆಗಳು ಯಾವುವು ಎಂಬುದನ್ನು ಗುರುತಿಸುವುದೇ ಈ ಲೇಖನದ ಉದ್ದೇಶ. ಅಲ್ಪ ಸ್ವಲ್ಪ ವಿಮರ್ಶೆಯೂ ಈ ಲೇಖನದಲ್ಲಿ ಸೇರಿರುತ್ತದೆ.

ಸುಮಾರು 120 ಕ್ಕೂ ಅಧಿಕ ಸಂಖ್ಯೆಯಲ್ಲಿ ರೈತ, ಕಾರ್ಮಿಕ ಮತ್ತು ವಿದ್ಯಾರ್ಥಿ ಬಂಧುಗಳನ್ನು ಗುಂಡಿಗೆ ಆಹುತಿ ತೆಗೆದುಕೊಂಡಿತ್ತು—ತಮ್ಮ ನ್ಯಾಯೋಚಿತ ಬೇಡಿಕೆಗಳ ಪೂರೈಕೆಗಾಗಿ ಹೋರಾಡುವ ವೇಳೆಯಲ್ಲಿ –ಗುಂಡೂರಾಯರ ಕಾಂಗ್ರೆಸ್ಸು (ಐ) ಸರಕಾರ, 1983ರಲ್ಲಿ "ಜನರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಶಾಂತಿಯುತ ಹೋರಾಟಗಳನ್ನು ನಡೆಸಿದರೆ, ಯಾವ ಸಂದರ್ಭದಲ್ಲೂ ಬಲಪ್ರಯೋಗ ಮಾಡುವುದಿಲ್ಲ, ಇದೇ ತಮ್ಮ ಸರಕಾರದ ಧೋರಣೆ" ಎಂದು ಪ್ರಥಮ ಶಾಸನ ಸಭಾಧಿವೇಶನದಲ್ಲೇ ಮುಖ್ಯಮಂತ್ರಿ ಹೆಗ್ಡೆಯವರು ಸಾರಿದ್ದರು. ಈ ಪೋಲೀಸು ಧೋರಣೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಕ್ಷದ ವಕ್ತಾರರು ವಿಧಾನ ಸಭೆಯ ಒಳಗಡೆಯೂ, ಹೊರಗೂ ಸ್ವಾಗತಿಸಿದ್ದರು. ಆರಂಭದಲ್ಲಿ ಈ ಧೋರಣೆಯ ಜ್ಯಾರಿಯಲ್ಲಿ ಹಲವು ಸಂದರ್ಭಗಳಲ್ಲಿ "ಆಭಾಸ" ಎದ್ದು ತೋರುತ್ತಿತ್ತಾದರೂ–ಬೆಂಗಳೂರು, ಹರಿಹರ, ಹುಬ್ಬಿ, ದಾಂಡೇಲಿಗಳಲ್ಲಿ – ಆ ನಂತರ, ಈ ಪ್ರಶ್ನೆಗಳು ಪರಿಹಾರಗೊಂಡ ನಂತರ ರಾಜ್ಯದಲ್ಲಿ ಹೆಗ್ಡೆಯವರ ಪೋಲೀಸು ಧೋರಣೆ ಹೆಚ್ಚು ಕಡಿಮೆ ಕಟ್ಟುನಿಟ್ಟಾಗಿ ಜ್ಯಾರಿಯಲ್ಲಿದೆ. ಪೋಲೀಸು ಅಧಿಕಾರಿಗಳ, ವಿಶೇಷವಾಗಿ "ಸ್ಟೇಷನುಗಳಲ್ಲಿ ಅಧಿಕಾರಾರೂಢರಾದವರ,ನಡವಳಿಕೆಯಲ್ಲಿ ಬಹಳಷ್ಟು ಬದಲಾವಣೆಯಾಗಬೇಕಾಗಿರುವುದಾದರೂ, ಸಾಮಾನ್ಯ ಜನರ ಹೋರಾಟಗಳ ವೇಳೆ ಅವರು ನಡೆದುಕೊಳ್ಳುವ ರೀತಿಯಲ್ಲಿ ಬದಲಾವಣೆಯಾಗಿದೆ ಎಂದು ಹೇಳಬಹುದು. ರುದ್ರಪ್ಪನವರ ನೇತೃತ್ವದಲ್ಲಿ ನಡೆದ ರೈತರ ಹೋರಾಟ, ರಾಜಕುಮಾರರ ನೇತೃತ್ವದಲ್ಲಿ ನಡೆದಭಾಷಾ ಚಳವಳಿ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಕ್ಷ ಮತ್ತು ಭಾರತ ಕಮ್ಯುನಿಸ್ಟ ಪಕ್ಷಗಳು ನಡೆಸಿದ ಹೋರಾಟಗಳನ್ನು ಇಲ್ಲಿ ಹೆಸರಿಸಬಹುದು. ಹೆಗ್ಡೆಯವರ "ಸೌಮ್ಯನೀತಿ" ಯನ್ನು ಎಲ್ಲರೂ ಹೊಗಳುವಂತಾಗಿದೆ.

ತುರ್ತು ಸ್ಥಿತಿಯ ವೇಳೆಯಲ್ಲಿ ಮತ್ತು ತುರ್ತು ಪರಿಸ್ಥಿತಿಯ ನಂತರ ಪ್ರತಿ ವರ್ಷ ಭಾರತ ಸರಕಾರವು ವರ್ಷಕ್ಕೆ ಒಂದೇ ಸರ್ತಿ ಫೆಬ್ರವರಿ - ಮಾರ್ಚಿ ತಿಂಗಳುಗಳಲ್ಲಿ ಆಯ–ವ್ಯಯ ಬಜೆಟ್‌ನಲ್ಲಿ ಇರಿಸಿ, ಚರ್ಚೆಗೆ ಒಳಪಡಿಸಿ, ಅಂಗಿಕೃತ ಮಾಡುವುದರ ಬದಲು, **ಎರಡು – ಮೂರು ಸರ್ತಿ** ಅಧಿಕ ಖರ್ಚಿನ ಬಾಬ್ತುಗಳನ್ನೂ, ಅಧಿಕ ಆದಾಯ ಸಂಗ್ರಹದ ಕ್ರಮಗಳನ್ನೂ ಲೋಕ ಸಭೆಯ ಅಂಗೀಕಾರಕ್ಕೆಂದು ತರುವುದು ಸಂಪ್ರದಾಯವಾಗಿ ಬಂದಿದೆ. ಈ ಕ್ರಮವನ್ನೇ ದೇಶದ ಹಲವು ರಾಜ್ಯಗಳ ಕಾಂಗ್ರೆಸು (ಐ) ಮಂತ್ರಿಮಂಡಲಗಳೂ ಅನುಸರಿಸುತ್ತಾ ಬಂದವು. ಇದರಿಂದ ಹಲವು ರೀತಿಯ ತೊಂದರೆಗಳು ಮತ್ತು ಬೆಳವಣಿಗೆಯ ಕುರಿತು ಯೋಜನಾರಹಿತ ದೃಷ್ಟಿ ಬೆಳೆದವು. ಆಯ–ವ್ಯಯ ಬಜೆಟಿನ ಕುರಿತೇ ಜನರಿಗೆ ತಾತ್ಸಾರ ಬರಲು ಆರಂಭವಾಯಿತು. ಶ್ರೀರಾಮಕೃಷ್ಣ ಹೆಗ್ಡೆಯವರ ಮಂತ್ರಿ ಮಂಡಲವು 1984ನೇ ವರ್ಷದ ಬಜೆಟನ್ನು ಪೂರ್ತಿಯಾಗಿ ಫೆಬ್ರವರಿ–ಮಾರ್ಚಿ ಅಧಿವೇಶನದಲ್ಲಿ ಮಂಡಿಸಿ, ಸುದೀರ್ಘ ಚರ್ಚೆಗೆ ಒಳಪಡಿಸಿ, ಅಂಗೀಕರಿಸಿಕೊಂಡು ರಾಜ್ಯದಲ್ಲಿ ಒಂದು ಹೊಸ ಸಂಪ್ರದಾಯವನ್ನು ಹಾಕಿತು. ಇದರಿಂದ ರಾಜ್ಯದ ಯೋಜನಾಬದ್ಧ ಬೆಳವಣಿಗೆಗೆ ತುಂಬಾ ಸಹಾಯಕವಾಗಿದೆ. ಯಾವ್ಯಾವ ಕಾರ್ಯಗಳಿಗೆ ಎಷ್ಟೆಷ್ಟು ಹಣ ನಿಗದಿಯಾಗಿದೆ ಎಂದು ಏಪ್ರಿಲ್ 1 ರಿಂದಲೇ ತಿಳಿಯುವಂತಾಗಿ, ಅದರ ವಿನಿಯೋಗವು ಕ್ರಮಬದ್ಧವಾಗಿ ಇಡೀ ವರ್ಷದಲ್ಲಿ ನಡೆಯುವುದಕ್ಕೆ ಅನುಕೂಲವಾಗಿದೆ. ಹಿಂದೆ, ಕಾಂಗ್ರೆಸ್ಸು (ಐ) ಅರ್ಥಿಕ ಮಂತ್ರಿ ವೀರಪ್ಪ ಮೊೖಲಿಯವರ ಕಾಲದಲ್ಲಿ ನಡೆದಂತೆ, ಎಲ್ಲಾ ಖರ್ಚು ವರ್ಷದ ಅಖೈರಿಗೆ ಗಡಿಬಿಡಿಯಲ್ಲಿ ನಡೆಯುವುದು ತಪ್ಪಿಹೋಗಿದೆ; ಒಂದು ವಿಭಾಗಕ್ಕೆ ಮೀಸಲಾಗಿಟ್ಟ ಹಣವು ಇನ್ನೊಂದು ವಿಭಾಗಕ್ಕೆ ಸಲೀಸಾಗಿ ಖರ್ಚಾಗುತ್ತಿದ್ದ ಕ್ರಮವು ಹೆಚ್ಚು ಕಡಿಮೆ ನಿಂತುಹೋಗಲು ಅನುಕೂಲವಾಗಿದೆ. ವಿವಿಧ ಬಾಬ್ತುಗಳಿಗೆ ಮೀಸಲಿಟ್ಟ ಹಣ "ಖರ್ಚಾಗದೆ ಹೋಗುವ" ಸಂದರ್ಭಗಳು ಕಡಿಮೆಯಾಗಿವೆ.

ಅಧಿಕಾರ ಮತ್ತು ಸಂಪನ್ಮೂಲಗಳ ಕಾನೂನು ಬದ್ಧ ವಿಕೇಂದ್ರೀಕರಣದಿಂದ ಮಾತ್ರ ಭಾರತದಂತಹ ವಿಶಾಲವಾದ ಹಲವು ರಾಷ್ಟ್ರ – ಸದೃಶ ರಾಜ್ಯಗಳಿಂದ ಕೂಡಿದ ದೇಶವು ಪ್ರಗತಿ ಸಾಧಿಸಲು ಸಾಧ್ಯ. ಆದರೆ ಕಾಂಗ್ರೆಸ್ಸು ಪಕ್ಷದ ಅವಿರತ 35 ವರ್ಷಗಳ ಆಡಳಿತೆಯಿಂದಾಗಿ ಈ ತತ್ವಕ್ಕೆ ತಿಲಾಂಜಲಿ ಕೊಡಲಾಗಿತ್ತು. ಪರಿಣಾಮವಾಗಿ ಇಂದು ದೇಶದಲ್ಲಿ ಕಾಂಗ್ರೆಸ್ಸೇತರ ಮಂತ್ರಿಮಂಡಲಗಳಿರುವಲ್ಲಿ ಮಾತ್ರವಲ್ಲ, ಕಾಂಗ್ರೆಸ್ಸೇ ಆಡಳಿತ ಪಕ್ಷವಾಗಿರುವ ಹಲವು ರಾಜ್ಯಗಳಲ್ಲಿ ಕೂಡಾ "ದೇಶದ ಸಂಪನ್ಮೂಲಗಳು ತಮ್ಮ ರಾಜ್ಯಕ್ಕೆ ನ್ಯಾಯಬದ್ಧವಾಗಿ ಹರಿದು ಬರುವಂತೆ ಕೇಂದ್ರ - ರಾಜ್ಯಗಳ ಸಂಬಂಧದಲ್ಲಿ ಘಟನಾಬದ್ಧ ಬದಲಾವಣೆಗಳಾಗಬೇಕು ಎಂದು ಕೂಗು ಎದ್ದಿದೆ. ಅದು ಇನ್ನೂ ಬದಲಾಗಬೇಕು, ಅದರ ಜತೆ ರಾಜ್ಯದ ಕೇಂದ್ರದಿಂದ ರಾಜ್ಯದ ಜಿಲ್ಲಾ ಕೇಂದ್ರಗಳಿಗೆ, ಜಿಲ್ಲಾ ಕೇಂದ್ರಗಳಿಂದ ಮಂಡಳಿ ಪಂಚಾಯಿತಿಗಳ ಮೂಲಕ ಗ್ರಾಮಾಂತರ ಪ್ರದೇಶಗಳಿಗೆ, ಅಭಿವೃದ್ಧಿ ಸಾಧಕ ಸಂಪನ್ಮೂಲಗಳು ಹರಿದು ಹೋಗುವಂತಾಗಬೇಕು. ಈ ಧೋರಣೆಗಾಗಿಯೇ ಪಶ್ಚಿಮ ಬಂಗಾಳದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಎಡರಂಗದ ಸರಕಾರವು ಕಾಂ. ಜ್ಯೋತಿಬಸುರವರ ಮೂಲಕ ಹೋರಾಡುತ್ತಾ ಬಂದಿದೆ. ಈಗ ಅವರ ಸ್ವರಕ್ಕೆ ಸ್ವರ ಸೇರಿಸಲು ಕರ್ನಾಟಕದ ಮುಖ್ಯಮಂತ್ರಿ ಹೆಗ್ಡೆಯವರು ತಯಾರಾದುದು ರಾಜ್ಯದ ಹಿತ ಸಾಧಿಸಬೇಕೆನ್ನುವ ಎಲ್ಲರಿಗೂ ಸಂತೋಷದಾಯಕ, ಮಾತ್ರವಲ್ಲ, ಅವರ ಜತೆ ಡಾ। ಫರೂಕ್ ಅಬ್ದುಲ್ಲಾ, ಎನ್. ಟಿ. ಆರ್. ಸ್ವಲ್ಪ ಮಟ್ಟಿಗೆ ಎಂ. ಜಿ. ಆರ್. ಸ್ವರ ಸೇರಿಸಿದಾಗ ಅದೊಂದು ರಾಷ್ಟ್ರೀಯ ಪ್ರವಾಹವಾಗಿ ಮಾರ್ಪಟ್ಟು ಶ್ರೀಮತಿ ಇಂದಿರಾ ಗಾಂಧಿ ಕೂಡಾ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲು ನಿರ್ಬಂಧಿತರಾಗಿ, "ಸರ್ಕಾರಿಯಾ ಕಮಿಷನ್" ನೇಮಕಗೊಂಡಿತೆಂಬುದನ್ನ ಇಲ್ಲಿಸ್ಮರಿಸಬಹುದು. ಯೋಜನೆ, ಅಧಿಕಾರ ಮತ್ತು ಸಂಪನ್ಮೂಲಗಳ ಈ ವಿಕೇಂದ್ರೀಕರಣ ಧೋರಣೆಯು ಜ್ಯಾರಿಗೆ ಬರುವ ತನಕ ಹೋರಾಟ ನಿಲ್ಲದು. ಸರ್ವಾಧಿಕಾರಿ ಮನೋಭಾವ, ಕೇಂದ್ರೀಕೃತ ಹಣಕಾಸಿನ ಧೋರಣೆ ದಿಲ್ಲಿಯಲ್ಲಿ ಆರೂಢಮಾನವಾಗಿರುವತನಕ ಈ ಹೋರಾಟಕ್ಕೆ ಹತ್ತು ಹಲವು ಆತಂಕಗಳು ಬರುವುದು ಸ್ವಾಭಾವಿಕ.ಒಮ್ಮೊಮ್ಮೆ ಯಾವ ರಾಜ್ಯ ಸರಕಾರಗಳು ಈ ಧೋರಣೆಗಾಗಿ ಹೋರಾಡುತ್ತೇವೆಯೋ ಆ ರಾಜ್ಯಗಳ ಹಣಕಾಸಿನ ಸ್ಥಿತಿಯನ್ನು ಹದಗೆಡಿಸಲು ಕೇಂದ್ರದ ಕಾಂಗ್ರೆಸ್ಸು (ಐ) ಸರಕಾರವು ಪ್ರಯತ್ನನಡೆಸುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ. 8ನೇ ಆರ್ಥಿಕ ಕಮಿಷನ್ನಿನ ಘಟನಾಬದ್ಧ ಶಿಫಾರಸಿನ ಮೇರೆಗೆ ರೂ. 2000 ಕೋಟಿಗಿಂತಲೂ ಅಧಿಕ ಹಣ 1934 ನೇ ವರ್ಷದಲ್ಲೇ ರಾಜ್ಯಗಳಿಗೆ ದೊರೆಯ ಬೇಕಾಗಿದ್ದರೂ, ಕಾಂಗ್ರೆಸ್ (ಐ) ನೇತೃತ್ವದ ಭಾರತ ಸರಕಾರವು 8ನೇ ಆರ್ಥಿಕ ಕಮಿಷನಿನ ಘಟನಾಬದ್ಧ ಶಿಫಾರಸುಗಳು "1935"ರಿಂದ ಜ್ಯಾರಿಗೆ ಬರಲಿ ಎಂದು ತೀರ್ಮಾನಿಸಿರುವುದನ್ನು ಇಲ್ಲಿ ಗಮನಿಸಬಹುದು. ಈ ರಾಷ್ಟ್ರೀಯ ಧೋರಣೆಗಾಗಿ ಇತರ ಕಾಂಗ್ರೆಸ್ಸೇತರ ಮುಖ್ಯಮಂತ್ರಿಗಳ ಜತೆಗೂಡಿ ಹೋರಾಟವು ಮುಂದಾದುದಕ್ಕಾಗಿಯೋ, ಡಾ. ಫರೂಕ್‌ಅಬ್ದುಲ್ಲಾರವರು ಇಂದಿರಾ ಗಾಂಧಿಯ ಕೋಪಕ್ಕೆ ತುತ್ತಾಗಬೇಕಾದುದನ್ನು ಇಲ್ಲಿ ನೆನಪಿಗೆ ತರಬಹುದು. ಆದರೂ, ಶ್ರೀ ರಾಮಕೃಷ್ಣ ಹೆಗ್ಡೆಯವರು ತಮ್ಮ ದೃಢತೆಯನ್ನು ಕಳೆದುಕೊಳ್ಳುವುದಿಲ್ಲವೆಂದು ನಾವು ಭರವಸೆಯಲ್ಲಿದ್ದೇವೆ.

ಕರ್ನಾಟಕ ಶಾಸನ ಸಭೆಯು ಅಂಗೀಕರಿಸಿದ ಜಿಲ್ಲಾಪರಿಷದ್ ಮತ್ತು ಮಂಡಲ ಪಂಚಾಯಿತು ಮಸೂದೆಗೆ ಈವರೆಗೆ ರಾಷ್ಟ್ರಾಧ್ಯಕ್ಷರು ಸಹಿ ಹಾಕದಿರುವುದು ಕಾಂಗ್ರೆಸ್ಸು (ಐ) ಸರ್ವಾಧಿಕಾರದ ದ್ಯೋತಕವಲ್ಲದೆ ಬೇರೇನು ?

ವಿದ್ಯಾಭ್ಯಾಸದ ಕೇಂದ್ರಗಳು ಇಂದು ಹಣದಅವ್ಯವಹಾರದ ಕೇಂದ್ರಗಳಾಗಿವೆ, ವ್ಯಾಪಾರಿ ಸಂಸ್ಥೆಗಳಂತೆ ಶಾಲಾ–ಕಾಲೇಜುಗಳನ್ನು, ಮೆಡಿಕಲ್ ಇಂಜಿನಿಯರ್‌ರಿಂಗ್–ಪಾಲಿಟೆಕ್ನಿಕ್ ಐ.ಟಿ.ಐ.ಗಳನ್ನು ನಡೆಸಲಾಗುತ್ತಿದೆ. ಈ ವ್ಯವಸ್ಥೆಗೆ ಎಷ್ಟುಬೇಗ "ಪೂರ್ಣ ವಿರಾಮ" ಹಾಕಲು ಸಾಧ್ಯವಾಗುತ್ತದೆಯೋಅಷ್ಟು ಬೇಗ ನಮ್ಮ ವಿದ್ಯಾಭ್ಯಾಸ ಕ್ಷೇತ್ರವು "ಸ್ಥಾಪಿತ ಹಿತಾಸಕ್ತಿಗಳ" ಮುಂಗಮುಷ್ಟಿಯಿಂದ ಬಿಡುಗಡೆಯಾಗಿ ವಿಕಾಸವಾಗಲು ಸಾಧ್ಯ. ಈ ದಿಕ್ಕಿನಲ್ಲಿ ಜನತಾ ಸರಕಾರವು ಇನ್ನೂ ದೃಢವಾದ ಭೀಮ ಹೆಜ್ಜೆಯನ್ನಿಡಲು ಸಾಧ್ಯವಾಗಲಿಲ್ಲ.

ಆದರೂ, ಒಂದೆರಡು ಸಣ್ಣ ಪುಟ್ಟ ಹೆಜ್ಜೆಗಳನ್ನು ಶ್ರೀರಾಮಕೃಷ್ಣ ಹೆಗ್ಡೆಯವರ ಸರಕಾರವು ಮುಂದಿಟ್ಟದೆ. ಆದರೆ ಅದೂ ನಡೆಯದಂತೆ ಮಾಡಲು ಕಾಂಗ್ರೆಸ್ಸು (ಐ) ನೇತೃತ್ವದಲ್ಲಿ ಸ್ಥಾಪಿತ ಹಿತಾಸಕ್ತಿಗಳು ಹಲವು"ವೇಷ" ಗಳನ್ನು ತಾಳುತ್ತಾ ಪ್ರಯತ್ನ ನಡೆಸುತ್ತಿದೆ. 5 ವರ್ಷಗಳಲ್ಲಿ ಕೆಪಿಟೇಶನ್ ಫೀರದ್ದು ಮಾಡುವ ಸರಕಾರದ ನೀತಿಯಿಂದಾಗಿ ವರ್ಷ ವರ್ಷ ಎಲ್ಲಾ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಖಾಸಗಿಯವರು ಕ್ಯಾಪಿಟೇಷನ್ ಫೀಗೆ ಮಾರಾಟಮಾಡುವ ಸೀಟುಗಳ ಸಂಖ್ಯೆ ಕಡಿಮೆಯಾಗುತ್ತಾ ಹೋಗುವಂತಾಗುವುದಾದರೂ,ಅದನ್ನು ಹಲವು ರೀತಿಯಲ್ಲಿ ವಿಫಲಗೊಳಿಸಲಾಗುತ್ತಿದೆ.

ವಿದ್ಯಾಭ್ಯಾಸದ ಸಮಗ್ರ ಮಸೂದೆಯನ್ನು ತರುವ ಮೂಲಕ ಎಲ್ಲಾ ವಿದ್ಯಾಕೇಂದ್ರಗಳ ಮೇಲೆ ಸರಕಾರದ ಹಿಡಿತವನ್ನು ತರುವ ನ್ಯಾಯವಾದ ಉದ್ದೇಶ ಕೈಗೂಡದಂತೆ, ಇಲ್ಲ ಸಲ್ಲದ ಅಪಪ್ರಚಾರವನ್ನು ಮಾಡಿ, ಈ ಮಸೂದೆಯು ಅಲ್ಪಸಂಖ್ಯಾತರು ನಡೆಸುವ ವಿದ್ಯಾ ಕೇಂದ್ರಗಳನ್ನು ಸರಕಾರವು ತನ್ನ ಅಧೀನದಲ್ಲಿ ತರಲು ಹವಣಿಸುತ್ತಿದೆ ಎಂದು ಹೇಳಿ ಇಡೀ ಮಸೂದೆಗೆ ರಾಷ್ಟ್ರಾಧ್ಯಕ್ಷರು ಸಹಿ ಹಾಕಬಾರದೆಂಬ ಕೂಗು ಎಬ್ಬಿಸಲಾಗುತ್ತಿದೆ. ಕಾಂಗ್ರೆಸ್ಸು (ಐ) ಕೇಂದ್ರ ಸರಕಾರದ ಪಿತೂರಿಗೊಳಗಾಗಿ ರಾಷ್ಟ್ರಾಧ್ಯಕ್ಷರು ಮಸೂದೆಗೆ ಈತನಕ ಸಹಿಹಾಕಲಿಲ್ಲ. ಯಾವಪ್ರಗತಿಪರ ಹೆಜ್ಜೆಯನ್ನೂ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಮುಂದಿಡಲು ಸ್ಥಾಪಿತ ಹಿತಾಸಕ್ತಿಗಳು ಬಿಡಲಾರರು ಎಂಬುದಕ್ಕೆ ಇದೊಂದು ಉದಾಹರಣೆ. 1958ರ ಕಾ. ಇ. ಎಂ. ಎಸ್. ನಂಬೂದರಿಪಾಡ್‌ರ ಪ್ರಥಮ ಕೇರಳ ಸರಕಾರ ಪ್ರೊಫೆಸರ್ ಮುಂಡಶ್ಶೇರಿಯವರ ನೇತೃತ್ವದಲ್ಲಿ ತಂದ ವಿದ್ಯಾ ಮಸೂದೆಗೂ ಇದೇ ಸ್ಥಾಪಿತ ಶಕ್ತಿಗಳು ವಿರೋಧ ಮಾಡಿದುದನ್ನ ಇಲ್ಲಿ ಸ್ಮರಿಸಬಹುದು.

6 ಲಕ್ಷ ಗೇಣಿದಾರರಿಗೆ ಪರಿಹಾರವಿಲ್ಲದೆ ಭೂಮಿಯ ಒಡೆತನದ ಹಕ್ಕನ್ನು ಕೊಡಲಾಗುತ್ತಿದೆ. ಎಂಬ ಜನತಾ ಸರಕಾರದ ಇತ್ತೀಚಿ । ತೀರ್ಮಾನವು ಅತ್ಯಂತ ಸ್ವಾಗತಾರ್ಹ. ಪರಿಹಾರ ತೆಗೆದುಕೊಂಡ ಕಾಂಗ್ರೆಸ್ (ಐ) ಧೋರಣೆಯ ಪ್ರತಿ ಗಾಮಿತ್ವವು ಇದರಿಂದ ಬಹಿರಂಗವಾಗಿದೆ. ಬಡಗೇಣಿದಾರರನ್ನು 'ಧನಿಗಳಿಗೆ' ಪರಿಹಾರವನ್ನು ಕೊಡುವ ತರಾ ತುರಿಯಲ್ಲಿ ಎಲ್ ಡಿ ಬ್ಯಾಂಕ್‌ನಲ್ಲಿ 11.5 ಶೇಕಡಾ ಬಡ್ಡಿಯ ಉರುಳಿನಲ್ಲಿ ಸಿಕ್ಕಿಸಿದ ಕಾಂಗ್ರೆಸ್ (ಐ) ಯ ದುರುಳ ನೀತಿ ಇದೀಗ ಬಯಲಾಗಿದೆ.

ಜನತಾ ಸರಕಾರವು ಈ ಉರುಳಿನಿಂದ ಈಗ ಕಾಂಗ್ರೆಸ್ಸು (ಐ) ಪಿತೂರಿಗೆ ಒಳಗಾಗಿ ಸಾಲ ಮಾಡಿ ಪರಿಹಾರ ಕೊಟ್ಟು ಬೇಂಕಿನ ಉರುಳಿಗೆ ಕುತ್ತಿಗೆ ಕೊಟ್ಟ ಬಡ ಗೇಣಿದಾರರನ್ನು ಉಳಿಸಬೇಕಾಗಿದೆ. ಅವರ ಪರಿಹಾರವನ್ನು ಸರಕಾರವೇ ಕೊಡುವ ತೀರ್ಮಾನ ಮಾಡಬೇಕು ಅಥವಾ ಕಟ್ಟಕಡೆಗೆ ಅವರು ಪರಿಹಾರ ಕೊಡುವುದರ ಬಗ್ಗೆ ಎಲ್ ಡಿ ಬೇಂಕಿನಲ್ಲಿ ಮಾಡಿದ ಸಾಲ ಮತ್ತು ಬಡ್ಡಿಯನ್ನಾದರೂ ಸರಕಾರವೇ ತೆರುವಂತೆ ಮಾಡಬೇಕು. ಇದು ಎಲ್ಲಾ ರೈತ ಸಂಘಗಳ ಆಶಯ.

ರಾಜ್ಯದಲ್ಲಿ 25 ಸಾವಿರದಷ್ಟು 'ದಿನಕೂಲಿ' ಯಲ್ಲಿ ಹತ್ತಿಪ್ಪತ್ತು ವರ್ಷ ಕಾಲ ಕೆಲಸ ಮಾಡುತ್ತಾ ಬಂದ ಪಿ ಡಬ್ಲ್ಯೂ ಡಿ ಕೆಲಸಗಾರರನ್ನು ಖಾಯಂ ಮಾಡಿ ತಿಂಗಳ ಸಂಬಳದವರನ್ನಾಗಿ ಮಾಡಿ ಅವರಿಗೆ ಇತರ ನೌಕರರಿಗೆ ಸಿಗುತ್ತಿರುವ ಸವಲತ್ತುಗಳನ್ನು ಒದಗಿಸಿದುದು ಜನತಾ ಸರಕಾರದ ದೃಢ ಆಡಳಿತ ನೀತಿಯು ಅತ್ಯಂತ ಸ್ವಾಗತಾರ್ಹ, ಕಾಂಗ್ರೆಸ್ಸು (ಐ) ಸರಕಾರವು ಪ್ರತಿಯೊಂದು ಡಿಪಾರ್ಟ್‌ಮೆಂಟಿನಲ್ಲಿ ಮಾತ್ರವಲ್ಲ ತಾನು ನಡೆಸುವ ಎಲ್ಲಾ ಕೈಗಾರಿಕಾ ಯೂನಿ

ಗಳಲ್ಲಿ—ಕೇಂದ್ರದಲ್ಲೂ, ರಾಜ್ಯದಲ್ಲೂ, —ಲಕ್ಷಗಟ್ಟಲೆ ಸಂಖ್ಯೆಯಲ್ಲಿ 'ದಿನ ಕೂಲಿ' ವ್ಯವಸ್ಥೆಯನ್ನು ಖಾಯಂ ಆಗಿ ಇಟ್ಟು ಕಾರ್ಮಿಕ ವರ್ಗಕ್ಕೆ ದ್ರೋಹ ಬಗೆಯುತ್ತಿದ್ದುದನ್ನು ಜನತಾ ಸರಕಾರವು ಮಾತ್ರ ಕಮ್ಯೂನಿಸ್ಟ್ ಪಕ್ಷಗಳ ಒತ್ತಡಕ್ಕೆ ಮಣಿದು ಅದರಲ್ಲೂ ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದ ಸಿ ಐ ಟಿ ಯು ಅಧ್ಯಕ್ಷ ಕಾ|| ಎಸ್. ಸೂರ್ಯ ನಾರಾಯಣ ರಾವ್‌ರ ಹಠಕ್ಕೆ ಮಣಿದು ಬದಲಿಗೆಳೆದದು ಸ್ತುತ್ಯಾರ್ಹ ಇದರಲ್ಲಿ ಆಗ ಪಿ ಡಬ್ಲ್ಯೂ ಡಿ ಮಂತ್ರಿಯಾಗಿದ್ದು ಈಗ ಜನತಾ ಪಕ್ಷದ ಅಧ್ಯಕ್ಷರಾದ ಶ್ರೀಮಾನ್ ದೇವೇ ಗೌಡರನ್ನು ಸ್ಮರಿಸಬಹುದು.

ಅದೇ ವೇಳೆ ಅಲ್ಲಲ್ಲಿ ಕೆಲಸನಿಲ್ಲಿಸಿ ಕಾಂಗ್ರೆಸ್ಸು (ಐ) ಸರಕಾರದ ಪರಂಪರೆಯನ್ನು ಮುರಿದು - ದೊಡ್ಡ ದೊಡ್ಡ ಕಂಟ್ರಾಕ್ಟ್‌ದಾರರ ಜತೆ ಶಾಮೀಲಾಗಿ ಎಂದು ಹೇಳಿದರೂ ತಪ್ಪಾಗದು— ರಾಜ್ಯದ ನೀರಾವರಿ ಯೋಜನೆಗಳನ್ನೂ ವಿದ್ಯುತ್ ಉತ್ಪಾದನಾ ಯೋಜನೆಗಳನ್ನೂ ತ್ವರಿತಗೊಳಿಸಲು ಪ್ರಯತ್ನಿಸುತ್ತಾ ಬಂದಿದೆ ಜನತಾ ಸರಕಾರ ಈ ಪ್ರಯತ್ನಕ್ಕೆ ಶೀಘ್ರವೇ ಜಯಸಿಕ್ಕಿ ರಾಜ್ಯದ ಜನತೆ ಸಾಕಷ್ಟು ನೀರಾವರಿ ಮತ್ತು ವಿದ್ಯುಚ್ಛಕ್ತಿಯನ್ನು ಪಡೆಯಲಿ ಎಂದೇ ನಮ್ಮೆಲ್ಲರ ಆಶೆ.

ನೀರಾವರಿ ಮತ್ತು ವಿದ್ಯುಚ್ಛಕ್ತಿಯು ಕರ್ನಾಟಕ ರಾಜ್ಯದಲ್ಲಿ ಇತರ ನೆರೆ ಹೊರೆಯ ರಾಜ್ಯಗಳಿಗಿಂತ ಕಡಿಮೆ ಪ್ರಮಾಣದಲ್ಲಿವೆ. ಪರಿಣಾಮವಾಗಿ, ರಾಜ್ಯದ ಕೃಷಿ ಮತ್ತು ಕೈಗಾರಿಕಾ ಬೆಳವಣಿಗೆಗೆ ತೀವ್ರ ಆಘಾತವುಂಟಾಗಿವೆ. ಈ ಸ್ಥಿತಿ ಎಷ್ಟು ಬೇಗನೇ ಸುಧಾರಿಸುವುದೋ ಅಷ್ಟು ಬೇಗನೇ ರಾಜ್ಯದ ಪ್ರಗತಿ ಸಾಧಿಸಲ್ಪಡುವುದು. ಇತ್ತೀಚೆಗೆ ರಾಯಚೂರಿನ ಥರ್ಮಾಲ್ ಸ್ಥಾವರದಲ್ಲಿ ಬೋಯ್ಲರ್ ಉರಿಸುವಿಕೆ ನಡೆದುದು ಸ್ವಾಗತಾರ್ಹ ಬೆಳವಣಿಗೆ.

ಅದೇ ವೇಳೆ, ಸರಕಾರಿ ಶಾಲೆ, ಹೈಸ್ಕೂಲ್, ಕಾಲೇಜುಗಳನ್ನು ಅಧ್ಯಾಪಕರಿಂದ ಭರ್ತಿ ಮಾಡುವ ಕೆಲಸ ಅತ್ಯಂತ ನಿಧಾನವಾಗಿ ಸಾಗುತ್ತಿದೆ ಎಂದು ಹೇಳದೆ ನಿರ್ವಾಹವಿಲ್ಲ. ಒಂದನೇ ಅಧಿವೇಶನದಲ್ಲೇ ಮಾರ್ಕ್ಸ್‌ವಾದೀ ಶಾಸಕರು ಈ ಬಗ್ಗೆ ಸರಕಾರವನ್ನು ಎಚ್ಚರಿಸಿದ್ದರೂ, ಮಂತ್ರಿ ಶ್ರೀಮಾನ ರಾಚಯ್ಯನವರು, ಈಗ ಶ್ರೀಮಾನ್ ರಘುಪತಿಯವರು, ಆಶ್ವಾಸನೆ ಕೊಟ್ಟರೂ, ಈ ತನಕ ಈ ದಿಕ್ಕಿನಲ್ಲಿ ನಡೆದ ಕೆಲಸ ಬಹಳ ನಿಧಾನ. ಇನ್ನಾದರೂ ತ್ವರಿತಗೊಳಿಸಿ 1985 ಜನವರಿಯಲ್ಲಾದರೂ ಸಾಕಷ್ಟು ಅಧ್ಯಾಪಕರು ನೇಮಕಗೊಂಡು ಸರಕಾರಿ ಶಾಲೆಗಳು ಖಾಸಗಿ ಶಾಲೆಗಳ ಜತೆ ಸ್ಪರ್ಧೆ ಮಾಡುವಂತಾಗಲಿ.

ಇಲ್ಲವಾದರೆ, ಸ್ಥಾಪಿತ ಹಿತಾ ಸಕ್ತಿಗಳ ದಾಳಕ್ಕೆ ಕುಣಿದ ಕಾಂಗ್ರೆಸ್ಸಿನ ದಾರಿಯನ್ನೇ ಜನತಾ ಪಕ್ಷವೂ ತುಳಿದಂತಾಗುವುದು ! ಜನತಾ ಪಕ್ಷದಲ್ಲಿ ಈ ಶಕ್ತಿಗಳು ಅಧಿಕಾರ ಬಂದ ನಂತರ ನುಸುಳಿ ಅವಾಂತರ ಮಾಡುತ್ತಿರುವುದನ್ನು ಎಂದೂ ಮರೆಯಲಾಗದು.

ಅಲ್ಲದೆ ಹತ್ತಿ, ತಂಬಾಕು, ಕಬ್ಬು, ಭತ್ತ ಇತ್ಯಾದಿ ರೈತರು ಬೆಳೆದ ಬೆಳೆಗಳಿಗೆ ನ್ಯಾಯವಾದ ಬೆಲೆಗಳು ರೈತರಿಗೆ ಸಿಗುವಂತೆ ಮಾಡುವ ದಿಸೆಯಲ್ಲಿ— ನ್ಯಾಯವಾದಬೆಲೆಗಳುನಿರ್ಧರಿಸಲ್ಪಡುವ ಹಾಗೆ, ಮಾರ್ಕೆಟುಗಳಲ್ಲಿ ಮಧ್ಯವರ್ತಿ ಗುತ್ತೇದಾರಿ ವ್ಯಾಪಾರಿಗಳಿಂದ ನಡೆಯುವ ಸುಲಿಗೆ ನಿಲ್ಲಿಸುವ ದಿಕ್ಕಿನಲ್ಲಿ ಕೆಲಸ ಕಾರ್ಯಗಳು ಸಾಕಷ್ಟು ನಡೆಯುತ್ತಿಲ್ಲವೆಂದೇ ಹೇಳಬೇಕು. ಭರವಸೆಗಳನ್ನು ಈಗಿನ ಸರಕಾರದ ಮಂತ್ರಿಗಳೂ ಹಿಂದಿನ ಕಾಂಗ್ರೆಸ್ಸು ಮಂತ್ರಿಗಳಂತೆ ಕೊಡುತ್ತಾರೆ ಮತ್ತು ಮರೆಯುತ್ತಾರೆ. ಇದು ತೀರಾ ಖಂಡನೀಯ. ಅದರಲ್ಲಿ ಅತ್ಯಂತ ದೊಡ್ಡ ಜನ ವಿಭಾಗದ ರೈತರಿಗೆ ಈ ರೀತಿ ಕೊಟ್ಟ ಭಾಷೆಯ ಪ್ರಕಾರ ನಡೆಯದಿರುವುದು ವಿಷಾದನೀಯ.

ಹತ್ತಿ ನಿಗಮದ ರಚನೆ ಕಾರ್ಯದಲ್ಲಿ ಸಾಕಷ್ಟು ಪ್ರಗತಿಯಾಗಲಿಲ್ಲವೆಂದೇ ಹೇಳಬೇಕು. ತಂಬಾಕು ನಿಗಮ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ. ಭತ್ತದ ವಿಷಯದಲ್ಲಿ ಗಿರಣಿ ಮಾಲಿಕರ ಬಗ್ಗೆ ಆಗಾಗ್ಗೆ ಕಟು ಮಾತುಗಳು ಕೇಳಿಬರುತ್ತಿದೆಯಾದರೂ, ಕಠಿಣ ಕಾರ್ಯಕ್ರಮ ಮಾತ್ರ ಶೂನ್ಯ.

ಕೃಷಿಕ್ಷೇತ್ರದಲ್ಲಿ ಮುಖ್ಯವಾಗಿ ಒಣಬೇಸಾಯದಲ್ಲಿ ಕ್ರಾಂತಿಯನ್ನ ಸಾಧಿಸುವ ಕುರಿತು ಧಾರಾಳ ಮಾತುಗಳು ಕೇಳಿ ಬರುತ್ತಿವೆ. ಆದರೆ ಕಾರ್ಯ ಎದ್ದು ಕಾಣುತ್ತಿಲ್ಲ.

ಸತತವಾಗಿ ಇದೀಗ 3ನೇ ವರ್ಷದಲ್ಲಿ ಬರಗಾಲವನ್ನು ಎದುರಿಸುತ್ತಿರುವ ಕರ್ನಾಟಕಕ್ಕೆ ಒಣ ಬೇಸಾಯದ ಕ್ರಾಂತಿ ವರದಾನವಾಗಲಿದೆ. ಅದನ್ನು ಕ್ಷಿಪ್ರವಾಗಿ ನಡೆಸುವ ದೃಢ ಹೆಜ್ಜೆಗಳನ್ನು ಸರಕಾರವು ಮುಂದಿಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಜನತಾ ಸರಕಾರವನ್ನು ಒತ್ತಾಯಿಸುತ್ತದೆ. ಹಾಗೆನೇ ರಾಜ್ಯದಲ್ಲಿ 24 ಕೈಗಾರಿಕೆಗಳ 75 ಲಕ್ಷ ಕಾರ್ಮಿಕರ ಕನಿಷ್ಠ ಕೂಲಿ ಇನ್ನೂ ಜಾರಿಯಾಗಲಿಲ್ಲ.

ಇದೇ ವೇಳೆ, ಬಹಳ ದುಃಖದ ಸಂಗತಿ ಏನೆಂದರೆ : ರಾಜ್ಯದಲ್ಲಿ ಜಾತೀಯ ಘರ್ಷಣೆಗಳು ಇತ್ತೀಚೆಗೆ ಹಲವೆಡೆ ಸತತವಾಗಿ ನಡೆಯುತ್ತಾ ಬರುತ್ತಿರುವ ವಿಷಯ ಹುಬ್ಬಳ್ಳಿ, ಬೆಳಗಾವಿಂ ಜಾತೀಯ-ಮತೀಯ ಗಲಭೆಗಳು ಎಲ್ಲರನ್ನು ಚಿಂತನೆಗೆ ಗುರಿಪಡಿಸಬೇಕಾದ ವಿಷಯಗಳು, ಕಾಂಗ್ರೆಸ್ [ಐ]ಯ ಕೈವಾಡ ಇದರಲ್ಲಿದೆ ಎಂದು ಹೇಳುವುದರಲ್ಲಿ ತಪ್ಪು ಇಲ್ಲವಾದರೂ, ಇದರಲ್ಲಿ ಬಿಜೆಪಿ ಮತ್ತು ಒಂದು ಭಾಗದ ಜನತಾ ದೊಡನಿರುವ ಸ್ಥಾಪಿತ ಶಕ್ತಿಗಳ ಕೈವಾಡ ಇಲ್ಲವೆಂದು ಹೇಳಲು ಸಾಧ್ಯವೇ ? ಬಿಜೆಪಿಯು ದೇಶದಲ್ಲಿ ಹೇಗೆಯೋ, ಹಾಗೆಯೇ ರಾಜ್ಯದಲ್ಲೂ ತನ್ನ ಮೂಲ ನೀತಿಗನುಸಾರವಾಗಿ ಅಲ್ಪ ಸಂಖ್ಯಾತರ ವಿರುದ್ಧ ಬಹುಸಂಖ್ಯಾತರು ಉರಿದೇಳುವುದಕ್ಕೆ ಎಲ್ಲಾ ರೀತಿಯಲ್ಲಿ ಉತ್ತೇಜನ ಕೊಡುತ್ತಿದ್ದಾರೆ ಎಂಬುದರಲ್ಲಿ ಏನೂ ಸಂಶಯವಿಲ್ಲ.

ಬಿಜೆಪಿಯ ಈ ನೀತಿಯಿಂದಾಗಿ, ಈ ಬಿಜೆಪಿಯ ಬೆಂಬಲವು ಶ್ರೀ ರಾಮಕೃಷ್ಣ ಹೆಗ್ಡೆಯವರ ಸರಕಾರಕ್ಕೆ ಅನಿವಾರ್ಯ ಎಂಬ ತನ್ನಸ್ಥಿತಿಯಿಂದಾಗಿ, ಕರ್ನಾಟಕದ ಜನತೆಯಲ್ಲಿ ಶ್ರೀ ರಾಮಕೃಷ್ಣ ಹೆಗ್ಡೆಯವರ ಸರಕಾರದ ಬಗ್ಗೆ ತಪ್ಪೋ ಸರಿಯೋ ಒಂದು ಅನುಮಾನ ವ್ಯಕ್ತವಾಗಿದೆ. ಇದರಲ್ಲಿ ಕಾಂಗ್ರೆಸ್ಸು (ಐ) ಪ್ರಚಾರವೂ ಇರಬಹುದು.

ಆದರೆ, ಜನತಾ ಸರಕಾರವು ಮತೀಯ ಸೌಹಾರ್ದ ಏರ್ಪಡಿಸುವುದರಲ್ಲಿ, ತತ್ವಬದ್ಧವಾಗಿ ಜಾತೀಯತೆ ಮತೀಯತೆ; ವಿಶೇಷವಾಗಿ ಮತೀಯ ಗಲಭೆಗಳನ್ನು ದೃಢವಾಗಿ ಹತ್ತಿಕ್ಕುವುದರಲ್ಲಿ ಇನ್ನೂ ಹೆಚ್ಚಿನ ದೃಢತೆಯನ್ನು ತೋರಿಸಬೇಕಾಗಿದೆ.

ಶ್ರೀಮಾನ್ ರಾಚಯ್ಯನವರು ತಮ್ಮ ಮನಸ್ಸನ್ನು ಈ ಕಡೆಗೆ ಹರಿಸುವರೇ ಎಂದು ಕಾದು ನೋಡಬೇಕಾಗಿದೆ. "ಹರಿಜನರು ಪ್ರತ್ಯೇಕವಾದ ಟ್ರೇಡ್ ಯೂನಿಯನ್‌ಗಳನ್ನು ಕಟ್ಟಿಕೊಳ್ಳಲು ಮುಂದಾಗಬೇಕು" ಎಂಬ ಅವರ ಇತ್ತೀಚೆಗಿನ ಹೇಳಿಕೆಯಂತೂ ತೀರಾ ಖಂಡನೀಯ.

ಪೋಲೀಸು ದಳಗಳು ಇತ್ತೀಚೆಗೆ ಮತೀಯ ಗಲಭೆಗಳ ವೇಳೆ ದೃಢವಾದ ಕ್ರಮಗಳನ್ನು ಮೊದಲೂ, ನಂತರವೂ ವಹಿಸುವುದರಲ್ಲಿ ತೀರಾ ಹಿಂದೆ ಬಿದ್ದಿವೆ ಎಂಬುದು ದೇಶದ ಹಲವಾರು ಕಡೆ ನಡೆದ ಗಲಭೆಗಳ ವಿಶ್ಲೇಷಣೆಯಿಂದ ತಿಳಿದು ಬಂದಿದೆ. ನಮ್ಮ ರಾಜ್ಯದಲ್ಲೂ ಸ್ಥಿತಿ ಇದೇ ಎಂಬುದರಲ್ಲಿ ಎರಡು ಮಾತಿಲ್ಲ. ಈ ತನ್ನಸ್ಥಿತಿ ಬದಲಾಗಬೇಕು. ಇದರಲ್ಲಿ ಬಿಜೆಪಿಯವರ ಸಲಹೆ ಸಲ್ಲದು.

ಜನತಾ ಪಕ್ಷದ ಸರಕಾರವು ಹೆಚ್ಚೆಚ್ಚು ಬ್ರಿಟಿಷರಿಂದ ನೇಮಿಸಲ್ಪಟ್ಟ ಐ.ಎ.ಎಸ್. ಅಧಿಕಾರಿಗಳ ಮೇಲೇನೇ ಅಧಿಕ ಅವಲಂಬಿಸಿ ಆಡಳಿತ ನಡೆಸುವುದರಿಂದ ಹಲವು ಪ್ರಶ್ನೆಗಳು ಉದ್ಭವಿಸುತ್ತವೆ. ಈ ಅಧಿಕಾರಿಗಳ ಮೇಲೆ ಹೊಂದಿಕೊಂಡಿದ್ದರೆ ಜನತೆಗೆ ಸಮೀಪವಾಗಿರುವ ಸರಕಾರವನ್ನು ಕೊಡಲು ಸಾಧ್ಯವೇ ?

ಒಟ್ಟಿನಲ್ಲಿ, ಜನತಾ ಪಕ್ಷದ ಸರಕಾರದಿಂದಲೇ ಕಾರ್ಮಿಕರ–ರೈತರ–ವಿದ್ಯಾರ್ಥಿಗಳ ಹಿತಗಳ ಕುರಿತು ದೃಢವಾದ ಹೆಜ್ಜೆಗಳನ್ನು ಅಪೇಕ್ಷಿಸುವುದು ತೀರಾ ಅಸ್ವಾಭಾವಿಕವಾಗಿದೆ. ಆದಕಾರಣ, ಕಾರ್ಮಿಕರು ಮತ್ತು ರೈತರು ವರ್ಗ ಸಂಘಟನೆಗಳನ್ನು ಕಟ್ಟಿ ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಸತತವಾಗಿ ವರ್ಗ ಹೋರಾಟವನ್ನು ವ್ಯಾಪಕವಾಗಿ ನಡೆಸಬೇಕು. ಪ್ರಗತಿಪರವಾದ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿಸಮುದಾಯವು ದೃಢವಾಗಿ ಸಂಘಟಿತವಾಗಿ ಹೋರಾಟವನ್ನು ನಡೆಸಬೇಕು. ವಿದ್ಯಾರ್ಥಿಗಳು ಯುವಕರು ಜತೆಜತೆಯಾಗಿ "ಉದ್ಯೋಗ ಇಲ್ಲವೇ ಜೈಲು" ಕಾರ್ಯಕ್ರಮಕ್ಕಾಗಿ ಗಂಭೀರವಾಗಿ ಹೋರಾಡಬೇಕು.

ಗ್ರಾಮಾಂತರ ಪ್ರದೇಶಗಳಲ್ಲೂ ಪೇಟೆ ಪಟ್ಟಣಗಳಲ್ಲೂ ಕಾರ್ಮಿಕ ವರ್ಗದ ನೇತೃತ್ವದಲ್ಲಿ ರೈತರೂ ಕೃಷಿ ಕೂಲಿಗಾರರೂ, ಮತ್ತು ಮಾಲೀಕರ ಹೋರಾಟಗಳು ವಿಶಾಲ ಪ್ರಮಾಣದಲ್ಲಿ ನಡೆಯುವುದೊಂದೇ ಪ್ರಗತಿಪರ ದಿಕ್ಕಿನಲ್ಲಿ ಜನತಾ ಪಕ್ಷದ ಸರಕಾರವು ದೃಢವಾದ ಹೆಜ್ಜೆಗಳನ್ನಿಡುವಂತೆ ಮಾಡುವ ಶಕ್ತಿ.

ಕಾಂಗ್ರೆಸ್ಸು [ಐ] ಆಡಳಿತೆಯನ್ನು ಸೋಲಿಸಿದ ಜನತೆಯ ತೀರ್ಮಾನಕ್ಕೆ ನಿರ್ಬಂಧಿತರಾಗಿ ಜನತಾ ಪಕ್ಷವು ತನ್ನ ಐಕ್ಯತೆಯನ್ನು ಉಳಿಸಿಕೊಂಡು, ಕೆಲವೊಂದು ಪ್ರಗತಿಪರ ಹೆಜ್ಜೆಗಳನ್ನು ಇಟ್ಟುಕೊಂಡು ಬಂದಿದೆಯಾದರೂ, ಇದು ಇನ್ನು ಮುಂದುವರಿದು ಹೋಗಿ ಜನಸಾಮಾನ್ಯರ ನಿಜವಾದ ಪ್ರಗತಿ ಸಾಧಿಸಲ್ಪಡುವಂತಾಗಬೇಕಾದರೆ, ಈ ಧೋರಣೆಗಳು ಇನ್ನೂ ದೃಢವಾಗಿ ಆಡಳಿತದ ಸೂತ್ರಗಳಾಗಿ ಬರಬೇಕಾಗಿದೆ; ಜನಸಾಮಾನ್ಯರ ವರ್ಗ ಹೋರಾಟ ಇನ್ನೂ ತೀವ್ರಗೊಳ್ಳಬೇಕು.

ಎಲ್ಲಾ ಎಡಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಈ ಹೋರಾಟ ನಡೆಸಲು ತೀವ್ರ ಕಾರ್ಯೋನ್ಮುಖರಾಗಬೇಕಾಗಿದೆ. ಆ ನತಕ....

○

ರೈತ ಸಂಘದ ರಚನೆ

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಒಂದು ಗ್ರಾಮವಾದ ಬಾಳುಗೋಡು ಗ್ರಾಮದಲ್ಲಿ ರೈತ ಸಂಘದ ಗ್ರಾಮ ಸಮಿತಿಯು ರಚನೆಯಾಗಿದೆ. ಈ ಗ್ರಾಮ ಮಲೆನಾಡಿನ ಒಂದು ಭಾಗದಲ್ಲಿದ್ದು ತೀರಾ ಹಿಂದುಳಿದ ಕುಗ್ರಾಮವಾಗಿದೆ. ಇಲ್ಲಿ ಹಸಿರು ಮುಂಡಾಸಿನ ರೈತ ಸಂಘವಾದ ಕರ್ನಾಟಕ ರಾಜ್ಯ ರೈತ ಸಂಘದ ಪ್ರಾಭಲ್ಯವಿತ್ತು. ಈ ಗ್ರಾಮದ ಶ್ರೀಮಂತ ರೈತರು ಭೂಮಾಲಿಕರ ಹಿತಾಸಕ್ತಿಗಾಗಿ ರಾಜ್ಯ ರೈತ ಸಂಘವು ಕೆಲಸ ಮಾಡುತ್ತಿತ್ತು. ಇದರಿಂದ ಬಡ ರೈತರೂ ಕೂಲಿಗಾರರೂ ಶ್ರೀಮಂತರ ದೌರ್ಜನ್ಯಕ್ಕೊಳಗಾಗಿದ್ದರು. ಈಗ ಅಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಶಾಖೆ ಪ್ರಾರಂಭವಾಗಿದೆ. ಮತ್ತು ನವಂಬರ್ 5 ರಂದು ಸಂಜೆ ರೈತರ ಸಭೆಯು ಕೊತ್ತನಡ್ಕ ಎಂಬಲ್ಲಿ ಕಾ|| ಜಯಂತಗೌಡರೆಂಬುವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಸಭೆಗೆ ಸುಳ್ಯ ತಾಲೂಕು ರೈತ ಸಂಘದ ಕಾರ್ಯದರ್ಶಿ ಕಾ|| ಭಾಸ್ಕರ ರಾವ್ ಭಾಗವಹಿಸಿ, ರೈತ ಸಂಘದ ಧ್ಯೇಯಧೋರಣೆ ಹಾಗೂ ಬಡ ರೈತ ಕೂಲಿಗಾರರು ಒಗ್ಗಟ್ಟಾಗ ಬೇಕಾದ ಅವಶ್ಯಕತೆಯನ್ನು ವಿವರಿಸಿದರು.

ಸಭೆಯಲ್ಲಿ ಕೆಳಗಿನ ಗ್ರಾಮ ಸಮಿತಿಯನ್ನೂ ರಚಿಸಲಾಯಿತು. ಕಾ|| ಜಯಂತಗೌಡ ಅಧ್ಯಕ್ಷ, ಕಾ|| ಸುಬ್ರಾಯಗೌಡ–ಉಪಾಧ್ಯಕ್ಷ, ಕಾ|| ಚಿನ್ನಪ್ಪಗೌಡ–ಪ್ರ. ಕಾರ್ಯದರ್ಶಿ, ಕಾ ಪುಟ್ಟಣ್ಣ ಅಜಿಲ–ಜತೆಕಾರ್ಯದರ್ಶಿ, ಕಾ|| ಇ. ಯಮ್. ಶಂಕರ–(ಸದಸ್ಯ), ಆನಂದ–(ಸದಸ್ಯ), ಕಾ|| ಬಾಲಣ್ಣ ಗೌಡ–(ಸದಸ್ಯ), ಅನಂತಪ್ಪ–(ಸದಸ್ಯ) ಕುಂಞ–(ಸದಸ್ಯ), ಮತ್ತು ಸಭೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಸದಸ್ಯತನ ನೊಂದಾಯಿಸಬೇಕೆಂದು ತೀರ್ಮಾನಿಸಿತು.

ಕೊನೆಗೆ ಕಾ| ಪುಟ್ಟಣ್ಣ ಅಜಿಲರಿಂದ ಧನ್ಯವಾದ ಸಮರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

○

ಸಹಕಾರಿ ಸಂಘದ ಸಭೆ

8–11–84 ರಂದು ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘದ ಆಡಳಿತ ಸಮಿತಿ ಸಭೆಯು ಸಂಘದ ಆಫೀಸಿನಲ್ಲಿ ಜರುಗಿತು.

ಪ್ರಾರಂಭದಲ್ಲಿ ಕಾರ್ಯದರ್ಶಿ ಕೆ. ನಾಗಶಯನರಾವ್ ಸಭೆಯ ಕಾರ್ಯಕಲಾಪಗಳ ವರದಿಯನ್ನು ಸಭೆಯ ಮುಂದಿಟ್ಟರು.

ಸಭೆಯ ಅಧ್ಯಕ್ಷತೆಯನ್ನು ಶ್ರೀ ಪಿ. ಪರಮೇಶ್ವರ ಶೆಟ್ಟಿಯವರು ವಹಿಸಿದ್ದರು.

ಪ್ರಥಮವಾಗಿ ಭಾರತದ ಜನಪ್ರಿಯ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ ನಿಧನಕ್ಕೆ ಶ್ರದ್ಧಾಂಜಲಿ ಅರ್ಪಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಬಳಿಕ 1984-85 ರ ಸಾಲಿಗೆ ಸಂಘದ ಅಧ್ಯಕ್ಷರನ್ನಾಗಿ ಹಿಂದಿನ ಅಧ್ಯಕ್ಷರಾದ ಶ್ರೀ ಪೌಲು ಡಿಸೋಜರನ್ನೆ, ಸರ್ವಾನುಮತದಿಂದ ಪುನರಾಯ್ಕೆ ಮಾಡಲಾಯಿತು.

ನಂತರ ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆ ಕೊನೆಗೊಂಡಿತು

●

ಸಿ.ಐ.ಟಿ.ಯು. ರಾಜ್ಯ ಸಮಿತಿ ಸಭೆ ನಿರ್ಣಯಗಳು

ಡಿಸೆಂಬರ್ 24 ರಂದು ನಡೆಯುವ ಲೋಕಸಭಾ ಚುನಾವಣೆಯಲ್ಲಿ ಸರ್ವಾಧಿಕಾರಿ ಕಾಂಗ್ರೆಸ್ (ಐ) ಪಕ್ಷವನ್ನೂ ಕೋಮುವಾದಿ ವಿಭಜನಕಾರಿ ಶಕ್ತಿಗಳನ್ನೂ ಸೋಲಿಸಿ, ಎಡ ಪ್ರಜಾಪ್ರಭುತ್ವವಾದೀ ಮತ್ತು ಜಾತ್ಯಾತೀತ ಶಕ್ತಿಗಳನ್ನು ಲೋಕ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಚುನಾಯಿಸಿ ಕಳುಹಿಸಬೇಕೆಂದು ಸಿ ಐ ಟಿ ಯು ಕರ್ನಾಟಕ ರಾಜ್ಯ ಸಮಿತಿಯು ಕರೆ ಕೊಟ್ಟಿದೆ. ರಾಜ್ಯ ಸಮಿತಿಯ ಅಧ್ಯಕ್ಷರೂ ಶಾಸಕರೂ ಆದ ಶ್ರೀ ಎಸ್. ಸೂರ್ಯನಾರಾಯಣರಾವ್ ಅವರ ಅಧ್ಯಕ್ಷತೆಯಲ್ಲಿ ಮೈಸೂರಿನಲ್ಲಿ ನವೆಂಬರ್ 14 ಮತ್ತು 15 ರಂದು ನಡೆದ ಸಭೆಯಲ್ಲಿ ಈ ಬಗ್ಗೆ ನಿರ್ಣಯವೊಂದನ್ನು ಅಂಗೀಕರಿಸಲಾಯಿತು.

ಮೈಸೂರಿನಲ್ಲಿರುವ **ಐಡಿಯಲ್** ಜಾವಾ ಮತ್ತು ಕೃಷ್ಣರಾಜೇಂದ್ರ ಮಿಲ್ಲುಗಳಲ್ಲಿ ಬೀಗ ಮುದ್ರೆಗಳನ್ನು (ಲಾಕೌಟು) ಬೇಷರತ್ತಾಗಿ ಹಿಂತೆಗೆದುಕೊಂಡು ಎಲ್ಲಾ ಕಾರ್ಮಿಕರನ್ನೂ ಮರಳಿ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯಿಸುವ ಎರಡು ನಿರ್ಣಯಗಳನ್ನು ಸಭೆಯು ಅಂಗೀಕರಿಸಿದೆ. ಕೃಷ್ಣರಾಜೇಂದ್ರ ಮಿಲ್ಲನ್ನು ತೆಗೆಯಬೇಕೆಂದು ಒತ್ತಾಯಿಸಲು ಸಿಐಟಿಯು ಶಿಷ್ಟ ಮಂಡಳಿಯೊಂದು ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಡೆಯವರು ಕಾರ್ಮಿಕ ಮಂತ್ರಿ ಎಂ. ಪಿ. ಪ್ರಕಾಶ್ ರವರನ್ನು ಭೇಟಿಯಾಗಲಿದೆ. ಈ ಲಾಕೌಟ್‌ಗಳನ್ನು ತೆಗೆದು ಎಲ್ಲಾ ಕಾರ್ಮಿಕರಿಗೆ ಬೇಷರತ್ತಾಗಿ ಕೆಲಸ ಸಿಕ್ಕುವಂತೆ ಒತ್ತಾಯ ತರಲು ಐಕ್ಯ ಚಳುವಳಿಯನ್ನು ಸಂಘಟಿಸಲು ಮತ್ತು ಮೈಸೂರ್ ಬಂದ್ ನಡೆಸಲು ಮೈಸೂರು ಜಿಲ್ಲಾ ಸಮಿತಿಗೆ ಸಿಐಟಿಯು ಆದೇಶ ಕೊಟ್ಟಿದೆ.

ಹುಬ್ಬಳ್ಳಿಯ ಆಳಿಂದ ಕಾರ್ಖಾನೆ ಮುಚ್ಚಿರುವುದರ ವಿರುದ್ಧ ಆ ಕಾರ್ಖಾನೆಯ ಕಾರ್ಮಿಕರು ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ಕೊಡುವ ನಿರ್ಣಯವನ್ನು ರಾಜ್ಯ ಸಮಿತಿಯು ಅಂಗೀಕರಿಸಿದೆ.

ರಾಜ್ಯದ ಹಲವು ಕೈಗಾರಿಕೆಗಳಲ್ಲಿ ಕನಿಷ್ಟ ಕೂಲಿಯನ್ನು ಪ್ರಕಟಿಸುವುದರಲ್ಲಿ ಆಗುತ್ತಿರುವ ವಿಳಂಬವನ್ನು ಗಂಭೀರವಾಗಿ ಪರಿಗಣಿಸಿದ ಸಮಿತಿಯು ಕೂಡಲೇ ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು, ಈಗಾಗಲೇ ಕೆಲವು ಕೈಗಾರಿಕೆಗಳಿಗೆ ಪ್ರಕಟವಾಗಿರುವ ಕನಿಷ್ಟ. ಕೂಲಿಯಲ್ಲಿ ಕಾರ್ಮಿಕರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ತುಟ್ಟಿಭತ್ಯೆಗೆ ಹಾಕಿರುವ ಸೀಲಿಂಗನ್ನು ತೆಗೆದು ಹಾಕಬೇಕೆಂದೂ, ಮೂರು ತಿಂಗಳಿಗೊಮ್ಮೆ ಬೆಲೆಯೇರಿಕೆಗೆ ಅನುಗುಣವಾಗಿ ತುಟ್ಟಿಭತ್ತೆಯನ್ನು ಪರಿಷ್ಕರಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದೆ.

ಇಂದಿರಾ ಗಾಂಧಿಯ ಹತ್ಯೆಯ ನಂತರ ನವದೆಹಲಿ ಮತ್ತು ಹಲವಾರು ನಗರಗಳಲ್ಲಿ ನಡೆದಿರುವ ಹತ್ಯಾಕಾಂಡದಲ್ಲಿ ಲಕ್ಷಾಂತರ ಜನರು ನಿರಾಶ್ರಿತರಾಗಿದ್ದು ಮನೆಗಳು, ವಾಹನಗಳು, ಕಾರ್ಖಾನೆಗಳು ಸುಟ್ಟು ಹೋಗಿದ್ದು, ಕೋಟ್ಯಾಂತರ ರೂಪಾಯಿ ನಷ್ಟವಾಗಿದ್ದು, ಈ ಬಗ್ಗೆ ತನಿಖೆ ನಡೆಸಲು, ಸುಪ್ರೀಂ ಕೋರ್ಟ ನ್ಯಾಯಾಧೀಶರೊಬ್ಬರ ನೇತೃತ್ವದಲ್ಲಿ ವಿಚಾರಣಾ ಆಯೋಗವನ್ನು ನೇಮಿಸಬೇಕೆಂದೂ, ಶಿಬಿರಗಳಲ್ಲಿ ನಿರಾಶ್ರಿತರನ್ನು ಸರಿಯಾಗಿ ನೋಡಿಕೊಂಡು ರಕ್ಷಣೆಯನ್ನು ಕೊಡಬೇಕೆಂದೂ ಸಭೆಯು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ನಿಕರಾಗುವಾದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಹಸ್ತಕ್ಷೇಪವನ್ನು ಸಭೆಯು ಖಂಡಿಸಿದೆ. ಪ್ರಾರಂಭದಲ್ಲಿ ಸಭೆಯು ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಸಿ ಐ ಟಿ ಯು ಮುಖಂಡರಾದ ಸುಧೀರ್‌ಕುಮಾರ್, ಭಾಸ್ಕರ್‌ರಾವ್, ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಉಪಾಧ್ಯಕ್ಷ ಅರವಿಂದ ಘೋಷ್ ಎಂ. ಪಿ. ಸಾಹಿತಿ ಶ್ರೀ ರಂಗರ ನಿಧನಗಳ ಬಗ್ಗೆ ಸಂತಾಪ ಸೂಚಕ ನಿರ್ಣಯಗಳನ್ನು ಅಂಗೀಕರಿಸಿತು.

ಬೆಂಗಳೂರು

ಡಿ. ವೈ. ಎಫ್. ಐ. ನಾಲ್ಕನೇ ವಾರ್ಷಿಕೋತ್ಸವ

17-11-1984 ರ ಸಂಜೆ ಡಿ. ವೈ ಎಫ್. ಐ. ಚಾಮರಾಜಪೇಟೆಯ ಘಟಕವು ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ನಾಲ್ಕನೇ ವಾರ್ಷಿಕೋತ್ಸವದ ಅಂಗವಾಗಿ ಚಾಮರಾಜ ಪೇಟೆಯಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಿತ್ತು.

ಜಿಲ್ಲಾ ಸಮಿತಿಯ ಸಂಚಾಲಕರಾದ ಕಾ. ಟಿ. ಶಿವ ಶಂಕರ್ ಅವರು ಸ್ವಾಗತಿಸಿದರು. ರಾಜ್ಯ ಕಾರ್ಯದರ್ಶಿ ಕಾ|| ಎಸ್. ಶಿವರಾಂ ಅವರು ಮಾತನಾಡುತ್ತ ಸಂಘಟನೆಯ ಸಂಸ್ಥಾಪನೆಯ ಉದ್ದೇಶಗಳನ್ನು ಹೇಳುತ್ತ, ಸಂಘಟನೆಯು ಯುವಜನರಲ್ಲಿರ ಬಹುದಾದ ಅಲ್ಪ ಕಾಲಿಕ ರಾಜಕೀಯವನ್ನು ಪರಿಗಣಿಸದೆ ಅವರಲ್ಲಿರುವ ನಿರುದ್ಯೋಗ, ಅನರಕ್ಷತೆ, ಉದ್ಯೋಗದಲ್ಲಿರುವ ಅಭದ್ರತೆ ಹಾಗೂ ವರದಕ್ಷಿಣೆ ಮುಂತಾದ ಸಮಸ್ಯೆಗಳನ್ನು ತೆಗೆದುಕೊಂಡು ಹೋರಾಡುವ ಸಾಮೂಹಿಕ ಸಂಘಟನೆಯೆಂದು ಹೇಳಿ, ರಾಷ್ಟ್ರದಲ್ಲಿನ ಪ್ರಸ್ತುತ ಸಮಗ್ರತೆಗೆ ವಿರೋಧವಾಗಿ ಕೆಲಸ ಮಾಡುತ್ತಿರುವ ಜಾತೀಯ ಮತೀಯ, ಪ್ರಾಂತೀಯ ಶಕ್ತಿಗಳು ಜನತೆಯನ್ನು ಒಡೆಯುತ್ತಿವೆ ಎಂದು ಹೇಳಿ, ಅಮೆರಿಕನ್ ಸಾಮ್ರಾಜ್ಯ ಶಾಹಿಗಳು ಈ ಸಂಘಟನೆಗಳ ಹಿಂದಿದ್ದು ಶ್ರೀಮತಿ ಇಂದಿರಾಗಾಂಧಿ ಅವರ ಹತ್ಯೆಗೆ ಕಾರಣರಾಗಿದ್ದು ಯುವಜನರು ಒಗ್ಗಟ್ಟಾಗಬೇಕೆಂದು ಕರೆ ನೀಡಿದರು.

ಡಿ. ವೈ. ಎಫ್. ಐ. ಜಿಲ್ಲಾ ಸಮಿತಿಯ ಸದಸ್ಯ ಕಾಂ| ಹೆಚ್.ಪಿ. ಜನಕರಾಜ್ ಸುಖೀರಾಜ್ಯ ಪತ್ರಿಕೆಯ ಸಂಪಾದಕ ಶ್ರೀ ಕೃಷ್ಣಪ್ಪ ಹಾಗೂ ಎಸ್. ಎಫ್. ಐ. ರಾಜ್ಯ ಕಾರ್ಯದರ್ಶಿ ಕಾ. ಎಸ್. ಆರ್. ಆರಾಧ್ಯ ಮತ್ತು ಅಧ್ಯಕ್ಷತೆ ವಹಿಸಿದ್ದ ಖ್ಯಾತವಕೀಲರಾದ ಕಾ. ಹೆಚ್. ಎನ್. ನಾಗಮೋಹನ್‌ದಾಸ ಇವರುಗಳು ಮಾತನಾಡುತ್ತ ಪ್ರಜಾಸತ್ತಾತ್ಮಕ ಸಂಘಟನೆಯಾದ ಡಿ. ವೈ. ಎಫ್.ಐ. ಗೆ ಸರ್ವರೂ ಸೇರಬೇಕೆಂದು ಕರೆ ನೀಡಿ, ಚಾಮರಾಜಪೇಟೆಯ ಎರಡನೇ ಮುಖ್ಯ ರಸ್ತೆಗೆ ಡಾ. ವಿ. ಸೀತಾರಾಮಯ್ಯ ರಸ್ತೆ ಎಂದು ನಾಮಕರಣ ಮಾಡಬೇಕೆಂದು ಒತ್ತಾಯಿಸಿದರು.

ಸಭೆಯ ಪ್ರಾರಂಭದಲ್ಲಿ ಡಿ. ವೈ. ಎಫ್.ಐ. ಸಾಂಸ್ಕೃತಿಕ ತಂಡದವರಿಂದ ಪ್ರಗತಿ ಪರ ಗೀತೆಗಳ ಕಾರ್ಯಕ್ರಮ ವಿದ್ದಿತು. ಸಮಾರಂಭದ ಕೊನೆಯಲ್ಲಿ ಚಾಮರಾಜಪೇಟೆಯ ಘಟಕದ ಸದಸ್ಯರಾದ ಕಾ. ನಾಗರಾಜ್ ಅವರು ವಂದನಾರ್ಪಣೆ ಮಾಡಿದರು.

(7ನೇ ಪುಟದಿಂದ)

ಮಾತ್ರ ಹೋರಾಟಕ್ಕಿಳಿಸಲು ಸಾಧ್ಯವಾಗಿ ಇತರ ಮಧ್ಯಮ ರೈತ, ಶ್ರೀಮಂತ ರೈತಾಪಿ ಜನತೆ, ಬೆಂಬಲ ಪಡೆಯಿತು. ಮಾತ್ರ ಸಾಧ್ಯವಾಯಿತು.

ಹೋರಾಟದ ಮುಖ್ಯ ಬೇಡಿಕೆಗಳು

ಕೆಲಸ ಕೇಳಿಬಂದ ಎಲ್ಲಾ ಗ್ರಾಮೀಣ ಬಡವರಿಗೆ ಕೆಲಸ ಒದಗಿಸಬೇಕು.

ಅಗತ್ಯ ವಸ್ತುಗಳನ್ನು ವ್ಯಾಪಕವಾಗಿ ಸಬ್ಸಿಡಿ ದರದಲ್ಲಿ ವಿತರಣೆ ಮಾಡಬೇಕು.

ನಷ್ಟವಾದ ಬೆಳೆಗೆ ಪರಿಹಾರ ಧನವನ್ನು ಕೊಡಬೇಕು.

ಬರಗಾಲಕ್ಕೆ ಶಾಶ್ವತ ಪರಿಹಾರವನ್ನೀಯಲು ದೊಡ್ಡ ನೀರಾವರಿಗಳನ್ನು ಕೂಡಲೇ ಕೈಗೆತ್ತಿಕೊಂಡು, ಇತರ ಅಂತರ್‌ಜಲ, ಹಾಗೂ ಕೆರೆ, ಕುಂಟೆಗಳ ಮುಖಾಂತರ ನೀರಾವರಿಯನ್ನು ಒದಗಿಸಬೇಕು.

ಜಾನುವಾರುಗಳಿಗೆ ಪುಕ್ಕಟೆಯಾಗಿ ಮೇವನ್ನು ಒದಗಿಸಬೇಕು.

ಹಾಗೂ ಇನ್ನಿತರ ಬೇಡಿಕೆಗಳನ್ನು ಪ್ರಚಾರಮಾಡಿ, ಕೇಂದ್ರ ಸರ್ಕಾರದ ನೀತಿಯನ್ನು ಜನರ ಮಧ್ಯೆ ಪ್ರಚಾರ ಮಾಡಲಾಯಿತು.

ವ್ಯಾಪಕ ಹೋರಾಟವನ್ನು ರೂಪಿಸಲು ರಾಜ್ಯ ಸಮಿತಿಗೆ ಕೇಳಬೇಕೆಂದು ತೀರ್ಮಾನಿಸಲಾಯಿತು. ಅಲ್ಲಿಯವರೆಗೆ ಸ್ಥಳೀಯವಾಗಿ ಹೋರಾಟವನ್ನು ಮುಂದುವರಿಸಲು ಕರೆಕೊಡಲಾಯಿತು.

ಎ. ಕೆ. ಜಿ. ಭವನ ನಿಧಿಗೆ ಸಹಾಯ

ಸಿ.ಪಿ.ಐ. (ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಮೂಲಕ ನೀಡಿದ ಹಣ ಸಹಾಯದ ವಿವರ

ಎಸ್. ಕೆ. ಟೈಲ್ ವರ್ಕರ್ಸ್ ಯೂನಿಯನ್, ಮಂಗಳೂರು 5000, ಬಿ. ಮಾಧವ 100, ಯು. ಬಿ. ಲೋಕಯ್ಯ 100, ಕೆ. ಮೂಸಬ್ಬ 100, ಕಮಲಾಕ್ಷ ಬಂಗೇರ 25, ಕೆ. ಶಂಕರ 25, ಸಿ. ನಾರಾಯಣ 25, ಬಿ. ವಾಸುಗಟ್ಟಿ 10, ಕೆ. ಸೂರ್ಯ ನಾರಾಯಣ ಭಟ್ 100, ಬಿ. ವಿಷ್ಣುಮೂರ್ತಿ 25, ಕೆ. ಮೋನಪ್ಪ ಗೌಡ 10,

ಕುಂದಾಪುರ ತಾಲ್ಲೂಕ್

ಶಿವರಾಂ ಶೆಟ್ಟಿ 25, ಗೋವಿಂದ ಶೆಟ್ಟಿಗಾರ್ 10, ಕರಿಯ ದೇವಾಡಿಗ 10, ಗೋಪಾಲ ದೇವಾಡಿಗ 5, ವಾಸು ದೇವಾಡಿಗ 5, ಪಿ. ಪಿ. ಜಾರ್ಜ್ 10, ಎಚ್. ಕುಶಾಲ 26, ಬಿ. ಶ್ರೀನಿವಾಸ 15, ನರಸಿಂಹ 5, ಯು. ದಾಸಭಂಡಾರಿ 15, ಮುತ್ತದೇವಾಡಿಗ 5, ಮಂಜು ನಾಯಕ್ 5, ಗಣಪಬಂಗೆರ 5, ನಾಗಪ್ಪ 5, ಲಕ್ಷ್ಮಣ 5, ಬಾಬು 5, ಶಿವರಾಂ 5, ನಾರಾಯಣ5, ಭೋಜ 5, ನರಸಿಂಹ 5, ಜಿ. ಮಹಮ್ಮದ್ 5, ಬಿ. ನಾಗಪ್ಪ 5, ಎಂ. ಶೀನ 5, ಡಿ. ನಾರಾಯಣ 5, ಎಂ. ಬಸವ 5, ಜಿ. ಪುಟ್ಟಯ್ಯ 5, ಡಿ. ಸುಬ್ಬ 5, ಎಂ. ಶೇಖರ್ 5, ಕೆ. ಮುದರ 5, ಕೆ. ನಾರಾಯಣ 5, ಎಂ. ಮುದುರ 5, ಕೆ. ಬಸವ 5, ಗುಂಡು 5, ಗಣಪ 5, ಜಿ. ಜೋಗ 5, ಕೆ. ಮಾಲಿಂಗ 5, ಜಿ. ಅಣ್ಣಯ್ಯ 5, ಎಂ. ನಾರಾಯಣ 5, ಡಿ. ಬಾಬು 5, ಎ. ಬಾಬು 5, ಜಿ. ಕರಿಯ 5, ಎ. ಗೋವಿಂದ 5, ಬಿ. ಬಸವ 5, ಹೆಚ್. ಶೀನ 5, ಕೋಡಿ ಬಾಬು 10, ಎಚ್. ನರಸಿಂಹ 10, ಎಲ್. ಶೀನ 10, ಬಿ. ಶೀನ 10, ಕೆ. ಶೇಖರ್ 10, ಕೆ. ಕ್ರಿಷ್ಣ 10, ಎಲ್. ರಾಮ 10, ಟಿ. ಮೋಹನ್ 10, ಯು. ಸುಧಾಕರ್ 10, ವೆಂಕಟೇಶ 10, ಆರ್. ಗೋಪಾಲ 10, ಎಂ. ಶೀನ 10, ಎಸ್. ಶೇಖರ್ 10, ತೆಕ್ಕಟ್ಟೆ ನರಸಿಂಹ 10, ಎಂ. ರಾಜೀವ 10, ಕೆ. ಗೋವಿಂದ 10, ಕೆ. ವಿಶ್ವನಾಥ 10, ಕೆ. ಶೀನ 10, ಕೆ. ಸುಧಾಕರ 10, ಕೆ. ಶೀನ 10, ಎಂ. ಶೇಖರ 10, ಕೆ. ನರಸಿಂಹ 10, ವಲ್ಲಿ ಡಿ"ಸೋಜ 10, ಮಹಾಬಲ ದೇವಾಡಿಗ 5, ಸುಬಾಸ್ 5, ಚಿಕ್ಕಯ್ಯ 5, ರಾಜೀವ ಶೆಟ್ಟಿ 5, ಬಸವ ಕುಲಾಲಾ 5, ಶಂಕರ ಮರಕಲ 5, ಕೂಸ ಕುಲಾಲಾ 5, ಕರಿಯ ಪೂಜಾರಿ 5, ಬಿ. ಬಚ್ಚು 5, ಚಂದ್ರಶೇಖರ ಶೆಟ್ಟಿ 5, ಎಂ. ಶೀನ 5, ವಿ. ಎಂ. ನಾರಾಯಣ 5, ಎಂ. ಗೋಪಾಲ 5, ರಾಜೀವ ಶೆಟ್ಟಿ 5, ಕೆ. ಶಂಕರ ಪೂಜಾರಿ 5, ಗೋಪಿ ರಾಮ 5, ಎಂ. ಶಂಕರ 5, ವಿ. ಶೀನ 5, ವಿ. ಬಾಬು 5, ಸಂಜು ದೇವಾಡಿಗ 5, ಕೆ. ಶೀನ ಪೂಜಾರಿ 5, ಮಂಜುನಾಥ ಪೂಜಾರಿ 5, ಮೋಹನ ದೇವಾಡಿಗ 5, ಆನಂದ ಪೂಜಾರಿ 5, ಬಿ. ಬಾಬು ಪೂಜಾರಿ 5, ನಂದಿ ಕುಲಾಲಾ 5, ಕೆ. ನರಸು ಪೂಜಾರಿ 5, ಚನ್ನ ಪೂಜಾರಿ 5, ವಿ. ಬಾಬು ಪೂಜಾರಿ 5, ಎನ್. ಇತ್ತು ಕುಲಾಲಾ 5, ಅನಂತ ಕುಲಾಲಾ 5, ಕೆ. ಗೋವಿಂದ ಪೂಜಾರಿ 5, ನರಸಿಂಹ ಪೂಜಾರಿ 5, ಕ್ರಿಷ್ಣ ದೇವಾಡಿಗ 5, ರಾಮ ಮಗಾರಾ 5, ನಾರಾಯಣ ಕಾರ್ವಿ 5,

(ಮುಂದುವರಿಯುವುದು)

ವಿದ್ಯುತ್ ಅವ್ಯವಸ್ಥೆ ಬಗ್ಗೆ, ಗ್ರಾಮಸ್ಥರ ಮನವಿ

ಮಂಗಳೂರಿನ ಕಣ್ಣೂರು ಮತ್ತು ಬಜಾಲ್ ಗ್ರಾಮಗಳಲ್ಲಿ ರಾತ್ರಿ 11 ಗಂಟೆಯವರೆಗೆ ಕಡಿಮೆ ವೋಲ್ಟೇಜ್ ಇರುವುದರಿಂದ ಮನೆಯ ದೀಪಗಳು ಉರಿಯುವುದಿಲ್ಲ. ಇದರಿಂದಾಗಿ ವ್ಯಾಪಾರಸ್ಥರಿಗೆ ಹಾಗೂ ಅಭ್ಯಾಸ ಮಾಡುವ ಶಾಲಾ ಮಕ್ಕಳಿಗೆ ತುಂಬಾ ಕಷ್ಟವಾಗಿದೆ. ಈ ಪ್ರದೇಶಕ್ಕೆ ಹೆಚ್ಚು ಶಕ್ತಿಯ ಟ್ರಾನ್ಸ್‌ಫೋರ್ಮರ್‌ಗಳನ್ನು ಹಾಕಬೇಕೆಂದೂ ಇಲ್ಲಿನ ಬೀದಿಗಳಿಗೆ ದೀಪದ ವ್ಯವಸ್ಥೆ ಇಲ್ಲದೆ ಸಾರ್ವಜನಿಕರಿಗೆ ರಾತ್ರಿಹೊತ್ತು ಸಂಚರಿಸಲು ಕಷ್ಟವಾಗಿರುವ ಕಾರಣ ಇಲ್ಲಿನ ಬೀದಿಗಳಿಗೆ ಬೀದಿ ದೀಪದ ವ್ಯವಸ್ಥೆ ಮಾಡಬೇಕೆಂದೂ ಒತ್ತಾಯಿಸಿ ಇಲ್ಲಿನ ನಿವಾಸಿಗಳು ತಾ 12-11-84 ರಂದು ಕೆ. ಇ. ಬಿ. ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರಿಗೆ ಮನವಿ ಅರ್ಪಿಸಿದರು. ಗ್ರಾಮಸ್ಥರ ನಿಯೋಗದ ನೇತೃತ್ವವನ್ನು ಶ್ರೀ ಕೆ. ಪೂವಪ್ಪಸಾಲಿಯಾನ್ ವಹಿಸಿದ್ದರು.

ರಾಯಚೂರು ಜಿಲ್ಲೆಯಲ್ಲಿ ಬರಗಾಲ ಪರಿಹಾರಕ್ಕಾಗಿ ತೀವ್ರ ಹೋರಾಟ

(ಪರಿಹಾರವಿಲ್ಲದೆ ಜಮೀನ್ದಾರಿ ಪದ್ಧತಿಯನ್ನು ರದ್ದು ಮಾಡಿ ಕೃಷಿ ಕೂಲಿಗಾರರಿಗೂ, ಬಡ ರೈತರಿಗೂ ಭೂಮಿಯನ್ನು ಪುಕ್ಕಟೆಯಾಗಿ ಕೊಡುವುದು, ರೈತರು, ಕೃಷಿಕೂಲಿಗಾರರು ಮತ್ತು ಸಣ್ಣ ಕಸಬುದಾರರು ಲೇವಾದೇವಿಗಾರರಿಗೆ ಮತ್ತು ಜಮೀನ್ದಾರರಿಗೆ ಕೊಡಬೇಕಾದ ಸಾಲಗಳನ್ನು ರದ್ದುಗೊಳಿಸುವುದು, ರೈತರಿಗೆ ಮತ್ತು ಕಸಬುದಾರರಿಗೆ ದೀರ್ಘಾವಧಿಯ ಹಾಗೂ ಕಡಿಮೆ ಬಡ್ಡಿಯ ಸಾಲವನ್ನು ಕೊಡಿಸುವುದು ಮತ್ತು ಕೃಷಿ ಉತ್ಪನ್ನಗಳಿಗೆ ನ್ಯಾಯವಾದ ಬೆಲೆ ಸಿಕ್ಕುವಂತೆ ಏರ್ಪಾಡನ್ನು ಖಚಿತ ಗೊಳಿಸುವುದು, ಸುಧಾರಿತ ಬೀಜಗಳು, ಆಧುನಿಕ ಉಪಕರಣಗಳು ಮತ್ತು ತಂತ್ರಗಳ ಬಳಕೆಯಿಂದ ರೈತರು ಬೇಸಾಯದ ವಿಧಾನಗಳನ್ನು ಉತ್ತಮಗೊಳಿಸಲು ರೈತರಿಗೆ ನೆರವು ನೀಡುವುದು, ಖಚಿತವಾದ ನೀರಾವರಿ ಸೌಕರ್ಯಗಳನ್ನು ಒದಗಿಸುವುದು,ಕೃಷಿ ಕೂಲಿಗಾರರಿಗೆ ಯೋಗ್ಯ ಕೂಲಿಗಳನ್ನು ಯೋಗ್ಯ ಜೀವನ ಪರಿಸ್ಥಿತಿಗಳನ್ನು ಖಚಿತ ಪಡಿಸುವುದು, ಬೇಸಾಯ, ಕೃಷಿ ಸೇವೆಗಳು ಮತ್ತು ಇತರ ಉದ್ದೇಶಗಳಿಗಾಗಿ ರೈತರು ಮತ್ತು ಕಸಬುದಾರರು ಸ್ವಂತ ಇಚ್ಛೆಯಿಂದ ಸಹಕಾರಿಗಳನ್ನು ರಚಿಸಲು ಪ್ರೋತ್ಸಾಹಿಸುವುದು, ಈ ಕಾರ್ಯಕ್ರಮ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ 1964 ರಲ್ಲಿ ಸ್ವೀಕರಿಸಿದ ಪಕ್ಷದ ಕಾರ್ಯಕ್ರಮದಲ್ಲಿ ನಮೂದಿಸಲ್ಪಟ್ಟಿದೆ.

ಇದರಂತೆಯೇ ನಮ್ಮ ದೇಶದ ಗ್ರಾಮಾಂತರ ಪ್ರದೇಶದ ಕೋಟ್ಯಾವಧಿ ರೈತರು ಕಡುಬಡತನದಲ್ಲಿ ಜೀವಿಸುತ್ತಿದ್ದಾರೆಂದೂ, ನಿರುದ್ಯೋಗ, ಹಸಿವು, ಸಾಲ, ದಾರಿದ್ರ್ಯ ಸಂಕಷ್ಟಗಳು ನಮ್ಮ ಹಳ್ಳಿ ಪ್ರದೇಶಗಳಲ್ಲಿ ತಾಂಡವವಾಡುತ್ತಿದ್ದು ರೈತರನ್ನು ನಾಶಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆಂದೂ ಹಳ್ಳಿಗಾಡು ಪ್ರದೇಶದ ನಿಜ ಚಿತ್ರವನ್ನು ಪಕ್ಷದ ಕಾರ್ಯಕ್ರಮದಲ್ಲಿ ಚಿತ್ರಿಸಿದ್ದಾರೆ.

ಬಂಡವಳಶಾಹಿ ಸಮಾಜದಲ್ಲಿ ನೀರಾವರಿ ಯೋಜನೆಗಳು ಸಮರ್ಪಕವಾಗಿ ಕೈಗೊಳ್ಳಲಾಗುತ್ತಿಲ್ಲ, ಬರಗಾಲವನ್ನೆದುರಿಸಲು ಸರಿಯಾದ ಕಾರ್ಯಕ್ರಮ ನಿರ್ಧರಿಸಲ್ಪಡುತ್ತಿಲ್ಲ. ಬರಗಾಲ ಪರಿಹಾರಕ್ಕಾಗಿ ವ್ಯಯವಾಗುವ ಹಣವೆಲ್ಲ ಪೋಲಾಗುತ್ತಿರುವ ಸಂಗತಿ ಗೊತ್ತಿಲ್ಲದವರಿಲ್ಲ.

ಇಂಥ ಪರಿಸ್ಥಿತಿಯಲ್ಲಿ ರೈತ ಸಂಘದ ಮೇಲೆ ಗುರುತರವಾದ ಜವಾಬ್ದಾರಿ ಬಿದ್ದಿರುತ್ತದೆ. ನೀರಾವರಿ, ಕೆರೆ, ಭಾವಿಗಳ ಸಲುವಾಗಿಯೂ ಹೋರಾಟ ಮಾಡಬೇಕು, ಬರಗಾಲ ಬಿದ್ದಾಗ, ಅದರ ಪರಿಹಾರ ಕಾರ್ಯಕ್ಕಾಗಿ ಪ್ರಯತ್ನಿಸಬೇಕು, ಖಾಯಂ ಪರಿಹಾರ ಕಾರ್ಯಕ್ರಮಗಳನ್ನೂ ಪ್ರಚಾರಗೊಳಿಸಬೇಕು. ಬಲಿಷ್ಟವಾದ ರೈತ ಸಂಘ ಎಲ್ಲಾ ತಾಲೂಕ್, ಹಳ್ಳಿಗಳಲ್ಲಿ ರಚನೆಯಾದರೆ ಮಾತ್ರ ಇಂಥ ಕೆಲಸಗಳನ್ನು ಮಾಡಲು ಸರಕಾರದ ಮೇಲೆ ಒತ್ತಾಯ ತರಬಹುದಾಗಿದೆ, ಗ್ರಾಮಾಂತರ ಪ್ರದೇಶದ ಜನರಲ್ಲಿ ವಿಶ್ವಾಸ ಹುಟ್ಟಿಸಬಹುದಾಗಿದೆ. ಅಂಥ ಚಟುವಟಿಕೆಯ ಮೂಲಕ ರೈತರಲ್ಲಿ ಜಾಗೃತಿಯನ್ನುಂಟು ಮಾಡಿ ಜನತಾ ಪ್ರಜಾಪ್ರಭುತ್ವ ರಂಗದಲ್ಲಿ ರೈತ ಸಂಘ ಸಕ್ರಿಯವಾಗಿ ಭಾಗವಹಿಸಿ ಜನತಾ ಪ್ರಜಾಪ್ರಭುತ್ವ ಸ್ಥಾಪನೆಗೆ ಸಹಾಯ ಮಾಡಬಹುದು.

ಕಳೆದ 2-3 ವರ್ಷಗಳಿಂದಷ್ಟೇ ರೈತರಲ್ಲಿ ಕೆಲಸ ಪ್ರಾರಂಭಿಸಿರುವ ರಾಯಚೂರಿನ ಜಿಲ್ಲಾ ರೈತ ಸಂಘದ ಯುವ ಮುಖಂಡರು ಈ ವರ್ಷ ಬರಗಾಲ ನಿವಾರಣಾ–ಬರಗಾಲ ಪರಿಹಾರ ಕಾರ್ಯಗಳಲ್ಲಿ ರೈತರ ಚಳುವಳಿ ಮೂಲಕ ಸರಕಾರ, ಅಧಿಕಾರಿಗಳ ಮೇಲೆ ಒತ್ತಡ ತಂದು ಯಾವ ರೀತಿ ಕೆಲಸ ಮಾಡುತ್ತಿದ್ದಾರೆಂಬುದರ ಬಗ್ಗೆ ರೈತ ಮುಖಂಡ ಚಂದ್ರಶೇಖರ ಬಾಳೆಯವರು ಒಂದು ವರದಿ ಸಲ್ಲಿಸಿದ್ದಾರೆ. ಹೆಚ್ಚಿನ ಚಳುವಳಿಗಳಲ್ಲಿ ಪಳಗದ ಈ ತರುಣ ರೈತ ಮುಖಂಡರು ಯಾವ ರೀತಿ ಪ್ರಚಾರ–ಪ್ರಕ್ಷೋಭೆ ಮಾಡುತ್ತಿದ್ದಾರೆ ಬರಗಾಲ ಪರಿಹಾರ ಒದಗಿಸುವುದರಲ್ಲಿ ಯಾವ ರೀತಿ ಪರಿಣಾಮಕಾರಿಯಾಗಿ ಮಧ್ಯ ಪ್ರವೇಶಿಸುತ್ತಿದ್ದಾರೆಂಬ ವಿಷಯಗಳನ್ನು ಈ ವರದಿಯಲ್ಲಿ ಕಾಣಬಹುದು. ಐಕ್ಯರಂಗ ಓದುಗರಿಗೆ ಇಂಥ ವರದಿಗಳ ಅಗತ್ಯವಿದೆ. ಚಂದ್ರಶೇಖರ ಬಾಳೆಯವರಿಗೆ ಸಂಪಾದಕ ಮಂಡಳಿ ಅಭಿನಂದನೆ ಸಲ್ಲಿಸುತ್ತಾ, ಇತರ ಜಿಲ್ಲೆಗಳಿಂದಲೂ ಇಂಥ ವರದಿಗಳು ಬರುವಂತಾಗಬೇಕೆಂದು ಆಶಿಸುತ್ತೇವೆ. ಸಂಪಾದಕ ಮಂಡಲಿ)

ರಾಜ್ಯದ ಹದಿನಾರು ಜಿಲ್ಲೆಗಳಲ್ಲಿ ರಾಯಚೂರು ಜಿಲ್ಲೆಯೂ ಒಂದಾಗಿದ್ದು, ನೀರಾವರಿ ಪ್ರದೇಶವು ಸೇರಿದಂತೆ ಭೀಕರ ಬರಗಾಲಕ್ಕೆ ಒಳಗಾಗಿ ಮುಂಗಾರು ಬೆಳೆ 90./. ನಾಶವಾಗಿ ಕೃಷಿ ಕೂಲಿಗಾರ, ಸಣ್ಣ ರೈತರು ಸೇರಿದಂತೆ ಲಕ್ಷಾಂತರ ಜನತೆ ಉಪವಾಸ ಬೀಳುವ ಪರಿಸ್ಥಿತಿಯುಂಟಾಗಿ ಗ್ರಾಮೀಣ ಬದುಕು ಸ್ಮಶಾನವಾಗಿತ್ತು.

ಅಖಿಲ ಭಾರತ ಕಿಸಾನ ಸಭಾದ ಕರೆಯ ಹಿನ್ನೆಲೆಯಲ್ಲಿ ಬರಗಾಲದಂಥಹ ಸಮಸ್ಯೆಗಳನ್ನು ಪ್ರತ್ಯೇಕವಾಗಿ ವಿಶಾಲವಾಗಿ ಸಂಘಟಿಸಲು, ಕರ್ನಾಟಕ ಪ್ರಾಂತ ರೈತ ಸಂಘ, ರಾಯಚೂರ ಜಿಲ್ಲಾ ಸಮಿತಿಯು 5-9-84 ರಂದು ತುರ್ತು ಸಭೆ ಸೇರಿ ಮೊದಲನೇ ಹಂತದ ಹೋರಾಟವಾಗಿ 10-9-84 ರಂದು ಜಿಲ್ಲಾಧಿಕಾರಿ ಕಛೇರಿಯನ್ನೊಳಗೊಂಡು ಇತರ ತಾಲೂಕ್ ಕಛೇರಿಗಳನ್ನು ಪಿಕೆಟಿಂಗ್ ಮಾಡುವ ಮುಖಾಂತರ ಜಿಲ್ಲೆಯಾದ್ಯಂತ ಚಳುವಳಿಯನ್ನು ಬೆಳೆಸಲು ತೀರ್ಮಾನಿಸಲಾಗಿ, ಅದನ್ನು ಜಾರಿಗೊಳಿಸಲು ಎಲ್ಲಾ ಪ್ರಯತ್ನವನ್ನು ಮಾಡಲಾಯಿತು.

ಸಪ್ಟೆಂಬರ್ ಹತ್ತರಿಂದ ಅಕ್ಟೋಬರ್ ಹತ್ತರೊಳಗೆ ಜಿಲ್ಲೆಯ ಏಳು ತಾಲೂಕಿನಲ್ಲಿ ಸಂಘಟಿಸಿ, ನವೆಂಬರ್ ಒಂದರವರೆಗೆ ಜಿಲ್ಲೆಯ ಏಳು ತಾಲೂಕಿನ 200, ಗ್ರಾಮಗಳ ಕನಿಷ್ಟ ಹತ್ತು ಸಾವಿರ ಜನರನ್ನು ಹೋರಾಟಕ್ಕಿಳಿಸಿ, 20000 ಜನರ ಮಧ್ಯ ಪ್ರಚಾರ ಕೈಗೊಳ್ಳಲಾಯಿತು. 20000 ಕರ ಪತ್ರಗಳನ್ನು ಮುದ್ರಿಸಿ ಗ್ರಾಮ ಸಭೆ, ಹೋಬಳಿಮಟ್ಟದ ಸಭೆ, ತಾಲೂಕು ಮಟ್ಟದ ಸಭೆಗಳ ಮುಖಾಂತರ ಕೃಷಿ ಕೂಲಿಗಾರ, ಸಣ್ಣ ರೈತರಿಗೆ ಕೆಲಸವನ್ನು ಪಡೆಯುವಲ್ಲಿ, ಸ್ವಲ್ಪ ಮಟ್ಟದಲ್ಲಿ ದನಗಳಿಗೆ ಮೇವು ಒದಗಿಸಲು ಸಾಧ್ಯವಾಯಿತು.

ಚಂದ್ರಶೇಖರ ಬಾಳೆ

ಸೆಪ್ಟಂಬರ್ 10 ರಂದು ರಾಯಚೂರು ಜಿಲ್ಲಾ ಕೇಂದ್ರದಲ್ಲಿ 2500ಕ್ಕು ಮೇಲ್ಪಟ್ಟು ರೈತ, ಕೃಷಿ ಕೂಲಿಗಾರರು ಜಿಲ್ಲಾಧಿಕಾರಿಯವರ ಕಛೇರಿಯನ್ನು ಮುಂಜಾವು ಎಂಟು ಘಂಟೆಯಿಂದಲೇ ಮುತ್ತಿಗೆ ಹಾಕಿ ಯಶಸ್ವಿ ಪಿಕೇಟಿಂಗ್ ನಡೆಸಿ ಯಾರನ್ನೂ ಒಳಗಡೆ ಹೋಗದಂತೆ ತಡೆದರು.

ಹನ್ನೆರಡು ಘಂಟೆಗೆ ವಿಶೇಷ ಜಿಲ್ಲಾಧಿಕಾರಿಯವರು, ಕಛೇರಿಗೆ ಬಂದಾಗ ಅವರಿಗೆ ಪ್ರವೇಶ ದೊರೆಯಲಾರದಾದಾಗ ಅವರು ಮರಳಿ ಹೋಗಬೇಕಾಯಿತು. ಪರಿಸ್ಥಿತಿಯ ಅರಿವು ಪಡೆದ ಜಿಲ್ಲಾಧಿಕಾರಿಗಳು ಮೂರು ಘಂಟೆಗೆ, ಮಾತುಕತೆಗೆ ಬಂದರು. ಆಗಸ್ಟ್ 25 ರಂದು 500 ಜನ ಮೆರವಣಿಗೆ ನಡೆಸಿಯೂ, ಸೆಪ್ಟೆಂಬರ್ 13 ರಂದು ಜಿಲ್ಲಾಧಿಕಾರಿಯವರ ಜೊತೆ ಮಾತುಕತೆ ಪ್ರಯೋಜನವಾಗಿರದ ಹಿನ್ನೆಲೆಯಲ್ಲಿ ರೈತರು ಜಿಲ್ಲಾಧಿಕಾರಿಯವರ ಜೊತೆಗೆ ಮಾತುಕತೆಗೆ ಒಪ್ಪದೆ ನಿರಾಕರಿಸಿದರು, ಅದರ ಪರಿಣಾಮವಾಗಿ ಜಿಲ್ಲಾಧಿಕಾರಿಗಳು ರೈತ ಸಮೂಹದ ಮುಂದೆ ರೈತ ಮುಖಂಡರ ಜೊತೆ ನೇರ ಮಾತುಕತೆ ನಡೆಸಿ ಹಲವಾರು ಬೇಡಿಕೆಗಳನ್ನು ಒಪ್ಪಿದರು ಅದರಲ್ಲಿ ಪ್ರಮುಖವಾಗಿ ಕೆಲಸ ಕೇಳಿ ಬಂದವರಿಲ್ಲಾ ಕೆಲಸ ಒದಗಿಸುವುದಾಗಿ, ರಾಯಚೂರು ತಾಲ್ಲೂಕಿನಲ್ಲಿ ಅಂದೇ ಸಭೆಯಲ್ಲಿ 200 ಕೆಲಸಗಳನ್ನು ಘೋಷಿಸಿದರು. ಹಾಗೂ ತುಂಗಭದ್ರಾ ಎಡದಂಡೆ ಕಾಲುವೆ ಬಿರುಕಿಗೆ ಸಂಬಂಧಿಸಿ ಚೀಫ್ ಇಂಜಿನಿಯರ್ ಹಾಗೂ ಇತರ ಪ್ರಮುಖ ಅಧಿಕಾರಿಗಳ ಜೊತೆಮಾತುಕತೆ ನಡೆಸಿದರು. ಐದು ಜನ ರೈತ ಪ್ರತಿನಿಧಿಗಳನ್ನು ಸ್ವತಃ ಜಿಲ್ಲಾಧಿಕಾರಿಯವರು, ಹಾಗೂ ಸಹಾಯಕ ಜಿಲ್ಲಾಧಿಕಾರಿಯವರು ಕರೆದೊಯ್ದು ಮಾತುಕತೆ ನಡೆಸಿದರು ನಂತರ, ಕೆಲಸ ಎಲ್ಲಾ ಕಡೆ ವ್ಯವಸ್ಥಿತವಾಗಿ ಶುರು ಮಾಡಿತು. ಗುತ್ತೇದಾರರ ಮುಖಾಂತರ ಕೆಲಸಗಳು ನಡೆಯದಂತೆ ತಡೆಗಟ್ಟ ಒತ್ತಾಯಿಸಿ 2-8-84 ರಂದು ಸುಮಾರು ಎರಡು ಸಾವಿರದಷ್ಟು ಕೃಷಿ ಕೂಲಿಕಾರರು ರಾಯಚೂರು ತಾಲ್ಲೂಕ ಕಛೇರಿಯನ್ನು ಮುತ್ತಿಗೆ ಹಾಕಿ ಯಶಸ್ವಿ ಪಿಕೇಟಿಂಗ್ ನಡೆಸಿದರು, ಹಾಗೂ ಕೇಂದ್ರ ಸರಕಾರದಿಂದ ಅಧ್ಯಯನ ತಂಡ ಬೇಟಿ ಕೊಡವುದನ್ನು ಬಳಸಿಕೊಂಡು 10-10-84 ರಂದು 3000 ಜನ ರೈತ ಕೃಷಿ' ಕೂಲಿಗಾರರ ಭಾರಿ ಮತ ಪ್ರದರ್ಶನ ನಡೆಸಿ ಮನವಿಯನು ಸಲ್ಲಿಸಲಾಯಿತು.

ಈ ಹೋರಾಟದಿಂದ ಗ್ರಾಮ ಸಭೆ, ಹೋಬಳಿ ಸಭೆಗಳ ಮುಖಾಂತರ ತಾಲ್ಲೂಕಿನಾದ್ಯಂತ ಭಾರಿ ಪ್ರಚಾರ ನಡೆಸಿ ಪ್ರಭಾವವನ್ನು ಬೀರಲು ಸಾಧ್ಯವಾಯಿತು.

ದೇವದುರ್ಗ ತಾಲ್ಲೂಕಿನಲ್ಲಿ ಸೆಪ್ಟಂಬರ್ ಹನ್ನೆರಡರಂದು ಸಾವಿರಕ್ಕೂ ಮೇಲ್ಪಟ್ಟು ರೈತ, ಕೃಷಿ ಕೂಲಿಕಾರರು ತಾಲ್ಲೂಕು ಕೇಂದ್ರದಲ್ಲಿ ಮೆರವಣಿಗೆ ನಡೆಸಿ, ತಾಲ್ಲೂಕಿನ ಕಛೇರಿಗಳನ್ನು ಯಶಸ್ವಿಯಾಗಿ 'ಪಿಕೆಟಿಂಗ್ ಮಾಡಿ ಕಾಮಗಾರಿಯನ್ನು ತೆಗೆದುಕೊಳ್ಳಲು ಒಪ್ಪಲಾಗಿ ಪಿಕೇಟಿಂಗ್ ತೆರವು ಮಾಡಲಾಯಿತು. ಹೆಚ್ಚಿನ ಪ್ರದೇಶಗಳಲ್ಲಿ ಕೆಲಸಗಳನ್ನು ಒದಗಿಸಲಾಯಿತು

ಲಿಂಗಸೂರು ತಾಲ್ಲೂಕಿನಲ್ಲಿ ಸೆಪ್ಟಂಬರ್ ಹತ್ತರಂದು ಎಂಟುನೂರು ಜನ ರೈತ ಕೃಷಿ ಕೂರಿಗಾರರು 25 ಕಿ.ಮಿ. ಕಾಲು ಜಾತಾ ನಡೆಸಿ ಸಹಾಯಕ ಜಿಲ್ಲಾಧಿಕಾರಿಯವರಿಗೆ ಅಂತಿಮ ಮನವಿಯನ್ನು ಸಲ್ಲಿಸಿ, ಶೀಘ್ರವಾಗಿ ಕಾಮಗಾರಿ ಒದಗಿಸಲು ಹಾಗೂ ಮಸ್ಕಿನಾಲಾ ಯೋಜನೆಯನ್ನು ಕೈಗೆತ್ತಿಕೊಳ್ಳಲು ಒತ್ತಾಯಿಸಲಾಯಿತು.

ಅಂತಿಮ ಮನವಿಯಿಂದಲೂ ಯಾವ ಪ್ರಯೋಜನವಾಗದಿಯಿದ್ದು 8-10-84 ರಿಂದ ಉಪವಾಸ ಸತ್ಯಾಗ್ರವನ್ನು ನಡೆಸಲಾಗಿ ಅದಕ್ಕೆ ಬೆಂಬಲಿಸಿ ಗ್ರಾಮಸಭೆ ಫಿರ್‌ಕಾ ಮಟ್ಟದ ಸಭೆಗಳನ್ನು ನಡೆಸಲಾಯಿತು. 10—10—84ರಂದು ರೂ. 75 ಲಕ್ಷ ಮಂಜೂರು ಮಾಡಲಾಯಿತು.

ಯಲಬಗಾರ್ ತಾಲ್ಲೂಕು ಮಟ್ಟದಲ್ಲಿ ಸಂಘಟಿಸುವ ಪೂರ್ವದಲ್ಲಿ ಕಾರ್ಯಕರ್ತರ ಸಭೆ ನಡೆದು, ವಿಶಾಲವಾದ ಸಭೆ ಸೇರಿಸಿ ತಾಲ್ಲೂಕು ಹೋರಾಟ ಸಮಿತಿಯನ್ನು ರಚಿಸಲಾಯಿತು.

ಹೋರಾಟ ಸಮಿತಿಯವರು 50 ಹಳ್ಳಿಗಳಿಗೆ ಸೈಕಲ್ ಮೇಲೆ ಹೋಗಿ ಗ್ರಾಮ ಸಭೆಗಳನ್ನು ನಡೆಸಿ ಪ್ರಚಾರ ಮಾಡಲಾಗಿ 29-10-84 ರಂದು 500, ಜನರ ಮೆರವಣಿಗೆಯನ್ನು ನಡೆಸಿ ತಹಸೀಲ್ದಾರರ ಜೊತೆ ಮಾತುಕತೆ ನಡೆದು. ನಗರದ ಮುಖ್ಯ ಬೀದಿಯಲ್ಲಿ ಬಹಿರಂಗ ಸಭೆಯನ್ನು ನಡೆಸಿ ಬೇಡಿಕೆಗಳು ಜಾರಿಗೊಳಿಸದೆ ಹೋದಲ್ಲಿ ತೀವ್ರ ಚಳುವಳಿಗೆ ಕರೆ ಕೊಡಲಾಯಿತು.

ನಗರದ ಇತರ ವಿಭಾಗದ ಜನತೆಯ ಬೆಂಬಲವನ್ನು ಕೇಳಲು ರಾತ್ರಿ ಏಳು ಘಂಟೆಗೆ ಮತ್ತೊಂದು ಬಹಿರಂಗ ಸಭೆಯನ್ನು ನಡೆಸಲಾಯಿತು.

ಗಂಗಾವತಿ ತಾಲ್ಲೂಕ್‌ವಲ್ಲಿ ಕಾರ್ಯಕರ್ತರು ಬೈಸಿಕಲ್ ಮೇಲೆ ಹಳ್ಳಿ ಹಳ್ಳಿಗೆ ಹೋಗಿ ಗ್ರಾಮ ಸಭೆಗಳನ್ನು ನಡೆಸಿ ಕನಿಷ್ಟ 50 ಹಳ್ಳಿಗಳಲ್ಲಿ ಪ್ರಚಾರ ನಡೆಸಿ, ಅವರನ್ನು ಹೋಬಳಿ ಮಟ್ಟದಲ್ಲಿ ಸಮಿತಿಗಳನ್ನು ನಡೆಸಿ ಕೊನೆಗೆ ಉಲ್ಲಾಹಳ್ಳಿಯ ರೈತ, ಕೂಲಿಗಾರರ ಸಮಾವೇಶವನ್ನು ನಡೆಸಿ ಒಂದು ಹೋರಾಟಸಮಿತಿಯನ್ನು ರಚಿಸಲಾಯಿತು. ಹನ್ನೆರಡು ಬೇಡಿಕೆಗಳನ್ನು ಒತ್ತಾಯಿಸಿ ಹೋರಾಟವನ್ನು ರೂಪಿಸಲು. ತೀರ್ಮಾನಿಸಿ ಮೊದಲನೇ ಹಂತವಾಗಿ ತಾಲ್ಲೂಕು ಕೇಂದ್ರದಲ್ಲಿ ಮೆರವಣಿಗೆಯನ್ನು ತೆಗೆದು ಅಲ್ಲಿಗೆ ಬೇಟಿಕೊಟ್ಟ ಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಿ ಒತ್ತಾಯಿಸಲಾಯಿತು.

ಮಾನ್ವಿ ತಾಲ್ಲೂಕ್ ಸಮಿತಿಯ ವತಿಯಿಂದ ಮನವಿ ಸಲ್ಲಿಸಿ ಬೇಡಿಕೆಗಳನ್ನು ಒತ್ತಾಯಿಸಲು ಮೂರು ಸರ್ಕಲ ಸಭೆಗಳನ್ನು 25 ಹಳ್ಳಿಗಳಲ್ಲಿ ಪ್ರಚಾರ ನಡೆಸಿ, ಜನತೆಯನ್ನು ಹೋರಾಟಕ್ಕೆ ಅಣಿಗೊಳಿಸಲಾಯಿತು. ಕೆಲವೆಡೆ ಮಾತ್ರ ಕೆಲಸ ಕೊಡಲಾಗಿದ್ದು 15-11-84 ರಿಂದ ಉಪವಾಸ ಸತ್ಯಾಗ್ರಹವನ್ನು ಶುರುಮಾಡಲಾಗಿದೆ.

ಕುಷ್ಟಗಿ ತಾಲ್ಲೂಕ್ ನಲ್ಲಿ ಕಾರ್ಯಕರ್ತರ ಸಭೆ ಸೇರಿಸಿ ವಿಸ್ತೃತ ಸಭೆ ಕರೆದು, ಸಂಚಾಲಕ ಸಮಿತಿಯನ್ನು ರಚಿಸಿ 15-10-84 ರಂದು ಹೋರಾಟಕ್ಕೆ ಕರೆಕೊಡಲಾಗಿ ನೂರಾರು ಜನರ ಮೆರವಣಿಗೆ ತೆಗೆದು ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿ ಬೇಡಿಕೆಗಳನ್ನು ಈಡೇರಿಸಲು. ಒತ್ತಾಯಿಸಿ ಕೊನೆಯಲ್ಲಿ ಬಹಿರಂಗ ಸಭೆಯನ್ನು ನಡೆಸಿ, ಮುಂದಿನ ಹೋರಾಟಕ್ಕೆ ತಯಾರಾಗಲು ಕರೆಕೊಡಲಾಯಿತು.

2-11-84 ರಂದು ಜಿಲ್ಲಾ ಸಮಿತಿ ಸಭೆ ಸೇರಿ ಬರಗಾಲಕ್ಕೆ ಸಂಬಂಧಿಸಿ, ನಡೆದ ಹೋರಾಟದ ಬಗ್ಗೆ ಕೂಲಂಕುಷ ಚರ್ಚೆ ನಡೆಸಿ, ಕೃಷಿ ಕೂಲಿಗಾರ, ರೈತಾಪಿ ಜನರಿಗೆ ಭಾದಿಸುತ್ತಿರುವ ಬೇಡಿಕೆಗಳಿಗಾಗಿ ಹೋರಾಟ ನಡೆಸಿದರು. ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಕಾರ್ಮಿಕ ಸಣ್ಣ ರೈತರನ್ನು

(6ನೇ ಪುಟ ನೋಡಿ)

ದೇಶದ ಸಮಗ್ರತೆ ಉಳಿಸಲು ಇ. ಎಂ. ಎಸ್. ಕರೆ

(1ನೇ-ಪುಟದಿಂದ)

ಪಕ್ಷಗಳು ಪಂಜಾಬ್ ಸಮಸ್ಯೆಯನ್ನು ರಾಜಕೀಯವಾಗಿ ಬಗೆಹರಿಸಬೇಕೆಂದು ಒತ್ತಾಯಿಸಿದರೂ ಕೂಡ ತನ್ನ ಸ್ವಾರ್ಥಕ್ಕಾಗಿ ಅಮೇರಿಕದ ಸಹಾಯದಿಂದ ಹಿಂದೂ–ಸಿಖ್ ಭಿನ್ನಾಭಿಪ್ರಾಯ ಹುಟ್ಟಿಸುತ್ತಿರುವ ಛಿದ್ರಕಾರಿ ಶಕ್ತಿಗಳಿಗೆ ಇಂದಿರಾ ಗಾಂಧಿ ಸಹಾನುಭೂತಿ ತೋರಿಸಿ, ರಕ್ಷಣೆ ನೀಡಿದ್ದರಿಂದ ಪರಿಸ್ಥಿತಿ ಕೈಮೀರಿ ಹೋಯಿತು. ಕೊನೆಗೆ ಸೈನಿಕರು ಸ್ವರ್ಣ ಮಂದಿರವನ್ನು ಪ್ರವೇಶಿಸಬೇಕಾಯಿತು. ಅದರಿಂದಾಗಿ ಸಾವಿರಾರು ಜನ ಸ್ವರ್ಣ ಮಂದಿರದೊಳಗೆ ಸಾಯಬೇಕಾಯಿತು. ದೇವಸ್ಥಾನದೊಳಗೆ ಮಿಲಿಟರಿ ಪ್ರವೇಶ ಸಿಖ್ ಜನರ ಮನೋಭಾವನೆಯನ್ನು ಕೆದರಿಸಿದೆ, ಹಿಂದೂ ವಿರೋಧಿ ಭಾವನೆ ಅವರಲ್ಲಿ ಅತಿಯಾಗಿ ಬೆಳೆದು ಬರುವಂತಾಯಿತು. ಇನ್ನು ಮುಂದಾದರೂ ಅಂಥ ಭಯೋತ್ಪಾದಕ ಘಟನೆಗಳು ನಡೆಯಲಾರವೆಂಬ ಆಶ್ವಾಸನೆಯನ್ನು ಹೊಸ ಪ್ರಧಾನ ಮಂತ್ರಿ ಕೊಡುತ್ತಾರೆಯೇ? ಯಾಕೆಂದರೆ ಈ ತರದ ಆಡಳಿತೆಯ ಅಸಮರ್ಥತೆ ಒಬ್ಬ ವ್ಯಕ್ತಿಯ ಜವಾಬ್ದಾರಿಯಲ್ಲ, ಇಡೀ ಸರಕಾರದ ಜವಾಬ್ದಾರಿಯೆಂಬುದನ್ನು ಅರಿಯಬೇಕು. ಈಗಿನ ಸರಕಾರ ಮುತುವರ್ಜಿಯಿಂದ ಕೆಲಸ ಮಾಡದಿದ್ದರೆ ಅಮೇರಿಕನ್ ಸಾಮ್ರಾಜ್ಯಶಾಹಿಗಳು ನಮ್ಮ ದುರ್ಬಲತೆಯ ದುರುಪಯೋಗ ಮಾಡಿಕೊಂಡು ಹೆಚ್ಚಿನ ಗಲಭೆ ಎಬ್ಬಿಸಲು ಪ್ರಯತ್ನ ಮಾಡುತ್ತಾರೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಸದ್ಯ ನಡೆದಿರುವ ಲೋಕಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ ಮುಖಂಡರು ಇಂದಿರಾ ಗಾಂಧಿಯ ಕೊಲೆಯ ಆಕೆಯ ಬೂದಿಯನ್ನು ಉಪಯೋಗ ಮಾಡಿ ಮತ ಗಳಿಸಲು ಪ್ರಯತ್ನದಲ್ಲಿದ್ದಾರೆ. ಇದು ಸರಿಯಲ್ಲ. ಇಂದಿರನ ಹೆಸರಲ್ಲಿ ಅವರು ಅಧಿಕಾರಕ್ಕೆ ಬರಲಿಚ್ಛಿಸಿದ್ದಾರೆ. ಇದನ್ನೆಲ್ಲ ನಾವು ಮತದಾರರಿಗೆ ತಿಳಿಸಿ ಹೇಳಬೇಕು.

ಕೇರಳದ ಮುಖ್ಯಮಂತ್ರಿ ಕರುಣಾಕರನ್‌ರವರು "ಭಾರತ ದೇಶವು ಅಳಿವು ಉಳಿವಿನ ಗಂಡಾಂತರದಲ್ಲಿದೆ. ಆದ್ದರಿಂದ ಕಾಂಗ್ರೆಸ್‌ಗೆ ಮತ ಕೊಡಿ" ಎಂದು ಮತದಾರರಿಗೆ ವಿನಂತಿ ಮಾಡಿಕೊಂಡಿದ್ದಾರೆ.

ಕಳೆದ 35 ವರ್ಷಗಳಿಂದಲೂ ದೇಶ ಗಂಡಾಂತರ ಪರಿಸ್ಥಿತಿಯಲ್ಲಿದ್ದದ್ದಾದರೆ, ಅಷ್ಟು ವರ್ಷಗಳಿಂದಲೂ ದೇಶವನ್ನು ಆಳುತ್ತಿದ್ದ ಕಾಂಗ್ರೆಸ್‌ಗೆ ಯಾವ ಆಧಾರದಿಂದ ಮತ ಹಾಕಬೇಕೆಂದು ನಾನು ಸವಾಲು ಹಾಕುತ್ತೇನೆ.

ನಮ್ಮ ದೇಶದ ಈಗಿನ ಪರಿಸ್ಥಿತಿಯಲ್ಲಿ ಒಂದು ಪಕ್ಷ ಒಬ್ಬ ಮುಖಂಡ ಎಂಬುದು ಉಳಿದಿಲ್ಲ. ನಮ್ಮಲ್ಲಿ ಹಲವಾರು ಪಕ್ಷಗಳೂ ಮುಖಂಡರೂ ಇದ್ದಾರೆ. ಆದ್ದರಿಂದ ಯಾವ ಕನಿಷ್ಠ ಕಾರ್ಯಕ್ರಮ ಯಾವ ಪಕ್ಷಕ್ಕಿದೆ, ಯಾವ ಕಾರ್ಯಕ್ರಮದಲ್ಲಿ ಅವರು ಸ್ಪರ್ಧಿಸುತ್ತಾರೆಂಬುದೇ ಮಹತ್ವವಾಗಿದೆ.

ನಾನು ಹಿರಿಯನಾಗಿ ರಾಮಕೃಷ್ಣ ಹೆಗಡೆಯವರಿಗೊಂದು ಬುದ್ಧಿವಾದದ ಮಾತು ಹೇಳಬೇಕೆಂದಿದ್ದೇನೆ. ಮತೀಯ ಪಕ್ಷವಾದ ಭಾರತೀಯ ಜನತಾ ಪಾರ್ಟಿ ಜೊತೆಯಲ್ಲಿ ಅವರು ಯಾವುದೇ ಸಂಬಂಧ ಇಟ್ಟುಕೊಳ್ಳಬಾರದು. ಅದರಿಂದಾಗಿ ಸಮಸ್ಯೆಗಳು ಉದ್ಭವಿಸುತ್ತವೆ. ಅಲ್ಪಸಂಖ್ಯಾತರು, ಹಿಂದುಳಿದವರನ್ನು ದೂರಮಾಡಿ, ಆ ರೀತಿಯ ಸಂಬಂಧ ಕಾಂಗ್ರೆಸ್‌ಗೆ ಸಹಾಯವಾಗಬಹುದು.

ನಾವು ಬಿ. ಜೆ. ಪಿ. ಹಾಗೂ ಇತರ ಜಾತೀಯ ಪಕ್ಷಗಳನ್ನು ನಂಬುವುದಿಲ್ಲ. ಆದರೆ ಇತರ ಪಕ್ಷಗಳ ಜೊತೆಯಲ್ಲಿ ನಾವು ಸಹಕರಿಸಲು ಸಿದ್ಧ.

ಜಾತೀಯ ಪಕ್ಷಗಳು ರಾಜಕೀಯದಲ್ಲಿ ಕೈ ಹಾಕಬಾರದು. ಜನತಾ ಪಕ್ಷ ಅಂಥ ಜಾತೀಯ ಪಕ್ಷಗಳ ಜೊತೆಯಲ್ಲಿ ಸಂಬಂಧ ಇಟ್ಟುಕೊಳ್ಳಬಾರದು. ಹಾಗಾದ್ದಲ್ಲಿ ಅದು ಇಡೀ ರಾಜ್ಯಕ್ಕೆ–ದೇಶಕ್ಕೆ ಅಪಾಯ.

ದೇಶದ ಸಮಗ್ರತೆಯನ್ನು ಉಳಿಸಬೇಕಾಗಿದೆ. ಐಕ್ಯತೆಯನ್ನು ಕಾಪಾಡಬೇಕಾಗಿದೆ ದೇಶಕ್ಕೆ ಅಪಾಯವಿದೆ. ಅದನ್ನು ನಾವು ತಡೆಯಬೇಕು. ಈ ಮಹಾ ಕಾರ್ಯದಲ್ಲಿ ಜನತೆ ನಮ್ಮೊಡನೆ ಸಹಕರಿಸಬೇಕೆಂದು ಕಾ. ಇ. ಎಂ. ಎಸ್. ಜನತೆಗೆ ಕರೆಕೊಟ್ಟರು.

ಚುನಾವಣಾ ನಿಧಿಗೆ ಸಹಾಯ ಮಾಡಿರಿ

ದೇಶದಲ್ಲಿ ಉಂಟಾಗಿರುವ ಅತ್ಯಂತ ಸಂಧಿಗ್ಧ ಸಮಯದಲ್ಲಿ ಲೋಕಸಭೆಯ ಚುನಾವಣೆ ನಡೆಯುತ್ತಿದೆ. ದೇಶದ ಸಮಸ್ಯೆಗಳ ಕುರಿತು ನಿರ್ದಿಷ್ಟ ನಿಲುವೆಯನ್ನು ಹೊಂದಿರುವ, ಜನರೆದುರಿಸುತ್ತಿರುವ ಸಮಸ್ಯೆಗಳಿಗೆ 17 ವಿರೋಧ ಪಕ್ಷಗಳನ್ನು ಸೇರಿಸಿ ಕನಿಷ್ಠ ಕಾರ್ಯಕ್ರಮದ ತಳಹದಿಯಲ್ಲಿ ಹೋರಾಟ ನಡೆಸುತ್ತಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ದೇಶದ ರಾಜಕೀಯದಲ್ಲಿ ಹೆಚ್ಚಿನ ಜವಾಬ್ದಾರಿ ಇದೆ. ಲೋಕಸಭೆಯಲ್ಲಿ ದೇಶದ ಹಾಗೆಯೇ ಜನರ ಸಮಸ್ಯೆಗಳನ್ನು ಪ್ರಭಾವಿತವಾಗಿ ಮಂಡಿಸಿ, ಅವುಗಳ ಸಲುವಾಗಿ ಹೊರಗೆ ತೀವ್ರ ಚಳುವಳಿ ನಡೆಸಿಕೊಂಡು ಹೋಗಬೇಕಾದರೆ, ಮುಂಬರುವ ಎಂಟನೇ ಲೋಕಸಭೆಯಲ್ಲಿ ನಮ್ಮ ಪಕ್ಷದ ಬಲವನ್ನು ಹೆಚ್ಚಿಸಬೇಕಾಗಿದೆ.

ಕರ್ನಾಟಕ ರಾಜ್ಯದ ಸಮಸ್ಯೆಗಳ ಕುರಿತು ಲೋಕಸಭೆಯಲ್ಲಿ ಪರಿಣಾಮಕಾರಿಯಾಗಿ ಹೋರಾಡುವ ಸದಸ್ಯರು ಯಾರೂ ಇಲ್ಲದಂತಾಗಿದೆ.

ಕರ್ನಾಟಕ ರಾಜ್ಯದಿಂದ, ಪಕ್ಷದ ಒಬ್ಬಿಬ್ಬ ಸದಸ್ಯರನ್ನು ಲೋಕಸಭೆಗೆ ಆರಿಸಿಕೊಟ್ಟು ನಮ್ಮ ಪಕ್ಷಕ್ಕೆ ಅಖಿಲ ಭಾರತ ಮಟ್ಟದಲ್ಲಿ ಸಹಾಯವಾಗಬೇಕೆಂಬ ಇಚ್ಛೆಯನ್ನು ನಾವು ಹೊದಿಂದ್ದೇವೆ.

ಚುನಾವಣೆ ಬಹಳ ದುಬಾರಿಯಾಗಿದ್ದು, ಚುನಾವಣಾ ಖರ್ಚಿಗೆ ಎಲ್ಲ ಪಾರ್ಟಿ ಸದಸ್ಯರೂ, ಸಹಾನುಭೂತಿದಾರರೂ, ರೈತರೂ, ಕಾರ್ಮಿಕರೂ, ಯುವಜನತೆ ಎಲ್ಲ ಅತ್ಯಧಿಕ ಹಣ ಕೂಡಿಸಬೇಕೆಂದೂ, ಚುನಾವಣೆಯಲ್ಲಿ ನಮ್ಮ ಉಮೇದುವಾರರು ಗೆಲ್ಲುವಂತೆ ಶ್ರಮಿಸಬೇಕೆಂದು ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಕೇಳಿಕೊಳ್ಳುತ್ತದೆ.

ಪಿ. ರಾಮಚಂದ್ರ ರಾವ್,
ಕಾರ್ಯದರ್ಶಿ
ಸಿ.ಪಿ.ಐ.[ಎಂ] ರಾಜ್ಯ ಸಮಿತಿ

ಕಾಂಗ್ರೆಸ್ಸನ್ನು ಸೋಲಿಸಲು ಅಣಿಯಾಗಿರಿ

(1ನೇ ಪುಟದಿಂದ)

ಕ್ರಮಬದ್ಧಗೊಳಿಸಲು ಮತ್ತು ಅವರ ಕೂಲಿ ಹೆಚ್ಚಿಸುವ ಬಗ್ಗೆ ಕ್ರಮತೆಗೆದುಕೊಳ್ಳಬೇಕೆಂದೂ ಕೇಳಿಕೊಳ್ಳುವ, ಡಿ. ಎಂ. ಕೆ. ಪಿ. ಕಾರ್ಯದರ್ಶಿ ಎ. ಕೆ. ಸುಬ್ಬಯ್ಯನವರ ಮೇಲೆ ನಡೆಸಿದ ಹಲ್ಲೆಯನ್ನು ಖಂಡಿಸುವ, ಆಕಾಶವಾಣಿ ಮತ್ತು ದೂರದರ್ಶನವನ್ನು ಕಾಂಗ್ರೆಸ್ (ಐ) ಪಕ್ಷದ ಪ್ರಚಾರ ಮಾಧ್ಯಮವಾಗಿ ದುರುಪಯೋಗಮಾಡಿಕೊಳ್ಳುತ್ತಿರುವುದನ್ನು ಖಂಡಿಸುವ, ಅರಣ್ಯ ಖಾತೆಯ ದಿನಗೂಲಿ ಕೆಲಸಗಾರರ ಬೇಡಿಕೆಗಳನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳುವ ನಿರ್ಣಯಗಳು ಪಾಸಾದವು.

ರಾಜ್ಯದ ಗೇಣಿ ರೈತರಿಗೆ ವಿಶೇಷವಾಗಿ ಅನುಕೂಲವಾಗುವ ಭೂ ಪರಿಹಾರ ಧನವನ್ನು ಸರಕಾರವೇ ತುಂಬಿಸುವ ರಾಜ್ಯ ಜನತಾ ಮಂತ್ರಿ ಮಂಡಲದ ತೀರ್ಮಾನವನ್ನು ರಾಜ್ಯ ಸಮಿತಿಯು ಸ್ವಾಗತಿಸಿತು. ಇದನ್ನು ಜಾರಿ ಮಾಡುವ ಸರಕಾರಿ ಆಜ್ಞೆಗಳನ್ನು ಕೂಡಲೇ ಹೊರಡಿಸಬೇಕೆಂದು ರಾಜ್ಯ ಸಮಿತಿಯು ಸರಕಾರವನ್ನು ಒತ್ತಾಯ ಪಡಿಸಿತು.

ಹಂಚು ಕಾರ್ಖಾನೆಗಳಲ್ಲಿ ಕೆಲಸದ ಪರಿಸ್ಥಿತಿ, ಕೂಲಿ ಇತ್ಯಾದಿಗಳನ್ನು ಪರಿಶೀಲಿಸಿ, ಸರಕಾರಕ್ಕೆ ಶಿಫಾರಸು ಮಾಡಲು ಒಂದು ತ್ರಿಪಕ್ಷ ಸಮಿತಿಯನ್ನು ರಚಿಸುವ ಕಾರ್ಮಿಕ ಮಂತ್ರಿಗಳ ಭರವಸೆಯನ್ನು – ಅದೂ ಸಾವಿರಾರು ಕಾರ್ಮಿಕರು ಹೋರಾಟ ಮಾಡುತ್ತಿದ್ದಾಗ – ಕೊಟ್ಟ ಭರವಸೆಯನ್ನು ಇನ್ನೂ ಹೆಚ್ಚು ವಿಳಂಬವಿಲ್ಲದೆ ಈಡೇರಿಸಬೇಕೆಂದೂ ಸಭೆಯು ಸರಕಾರವನ್ನು ಒತ್ತಾಯ ಮಾಡಿತು. ಒತ್ತುವರಿ ಭೂಮಿ, ಭೂ ಹೀನರು ಆಕ್ರಮಿಸಿರುವ ಭೂಮಿಯನ್ನು ಅವರವರಿಗೆ ಮಂಜೂರಿ ಮಾಡುವ ಹುಕಂ ಸರಕಾರ ಹೊರಡಿಸಬೇಕೆಂದೂ ಕೇಳಿಕೊಳ್ಳಲಾಯಿತು.

ಡಿ. ವೈ. ಎಫ್. ಐ. ರಾಜ್ಯ ಸಮಿತಿಯ ಸಭೆ

ಡಿ. ವೈ. ಎಫ್. ಐ. ಕರ್ನಾಟಕ ರಾಜ್ಯ ಸಮಿತಿಯ ಸಭೆಯು ಬೆಂಗಳೂರಿನಲ್ಲಿ 1984 ಡಿಸೆಂಬರ್ 1—2 ಶನಿವಾರ—ಭಾನುವಾರ ನಡೆಯಲಿದೆ. ಎಲ್ಲ ರಾಜ್ಯ ಸಮಿತಿಯ ಸದಸ್ಯರು ಹಾಗೂ ಆಹ್ವಾನಿತರು 1-12-84ರ ಬೆಳಿಗ್ಗೆ ಬೆಂಗಳೂರನ್ನು ತಲುಪಿರಬೇಕೆಂದು ವಿನಂತಿ.

1984ರ ಸದಸ್ಯತ್ವವನ್ನು ಎಲ್ಲಾ ಕೆಳ ಸಮಿತಿಗಳು ರಾಜ್ಯ ಸಮಿತಿಯ ಸದಸ್ಯರಿಗೆ ಕಳುಹಿಸಬೇಕು. ಸದಸ್ಯತ್ವವನ್ನು ಸ್ವೀಕರಿಸುವುದು ಇದೇ ಕೊನೆಯಾಗುತ್ತದೆ. 1984 ಡಿಸೆಂಬರ್ ತಿಂಗಳಿನಲ್ಲಿ ಜಿಲ್ಲಾ ತಾಲ್ಲೂಕ್ ಸಮಿತಿಗಳು ಹಮ್ಮಿಕೊಂಡಿರ ಬಹುದಾದ ಸ್ಥಳೀಯ ಕಾರ್ಯಕ್ರಮಗಳನ್ನು 1985 ಜನವರಿ ತಿಂಗಳಿಗೆ ಚುನಾವಣೆಯ ನಿಮಿತ್ತ ಮುಂದೂಡಬೇಕೆಂದು ರಾಜ್ಯ ಕಾರ್ಯದರ್ಶಿ ಕಾ. ಎಸ್. ಶಿವರಾಂ ಕೋರಿದ್ದಾರೆ.

ಕಾಂಗ್ರೆಸ್‌ನಿಂದ ಚುನಾವಣಾ ನಿಯಮಗಳ ಉಲ್ಲಂಘನೆ

ಸದ್ಯ ಬರಲಿರುವ ಲೋಕಸಭಾ ಚುನಾವಣೆಯ ಪ್ರಚಾರ ನಡೆಯುತ್ತಿರುವಾಗ ಆಳುವ ಪಕ್ಷಗಳ ಮಂತ್ರಿಗಳಿಗೆ ಚುನಾವಣಾ ಆಯೋಗ ಕೆಲವು ನೀತಿ ನಿಬಂಧನೆಗಳನ್ನು ಸೂಚಿಸಿದೆ ಚುನಾವಣೆಯ ತಾರೀಕನ್ನು ಘೋಷಿಸಿದ ನಂತರ ಮಂತ್ರಿಗಳಾಗಲಿ, ಇತರ ಅಧಿಕಾರಿಗಳಾಗಲೀ, ಮತದಾರರಿಗೆ, ಕುಡಿಯುವ ನೀರು ಒದಗಿಸುತ್ತೇವೆ. ರಸ್ತೆ ಅಗಲ ಮಾಡುತ್ತೇವೆ ಯೋಜನೆಗಳನ್ನು ಕೈಗೊಳ್ಳುತ್ತೇವೆ. ಹಣ ಮಂಜೂರಿ ಮಾಡುತ್ತೇವೆ ಇಂಥ ಆಶ್ವಾಸನೆಗಳನ್ನು ನೀಡಬಾರದೆಂದೂ, ಅವುಗಳಿಗೆ ಸಂಬಂಧ ಪಟ್ಟ ಕಾರ್ಯಕ್ರಮಗಳಲ್ಲೂ ಭಾಗವಹಿಸಬಾರದೆಂದೂ ಆದೇಶ ನೀಡಿದೆ.

ಆದರೆ ಕೇಂದ್ರ ಸರಕಾರದ ಕೆಲವು ಮಂತ್ರಿಗಳೂ, ಅಧಿಕಾರಿಗಳೂ ಈ ನಿಯಮವನ್ನು ಉಲ್ಲಂಘಿಸುತ್ತಿದ್ದಾರೆಂದು ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ಜ್ಯೋತಿ ಬಸು ಅವರು ಆರೋಪಿಸಿದ್ದಾರೆ.

ರೈಲ್ವೆ ಮಂತ್ರಿ ಘನಿಖಾನ್ ಚೌದರಿಯವರು ಕಾಂಕ್ರೀಟ್ ಸ್ಲೀಪರ್ ತಯಾರಿಸುವ ಒಂದು ಘಟಕದ ಅಡಿಗಲ್ಲು ಸಮಾರಂಭದಲ್ಲಿ. ಒಂದು ಆಟದ ಬಯಲಿನ ಉದ್ಘಾಟನೆಯಲ್ಲಿ ಭಾಗವಹಿಸಿದರೆಂದೂ, ಇವೆರಡೂ ಅವರ ಮತ ಕ್ಷೇತ್ರವಾದ ಮಾಲ್ದಾದಲ್ಲಿಯೇ ಇದೆಯೆಂದೂ ಹಾಗೆಯೇ ನವಂಬರ 14 ರಂದು ದುರ್ಗಾಪುರದಿಂದ ಒಂದು ಹೊಸ ತೀವ್ರ ವೇಗದ ರೈಲ್ವೆಯನ್ನು ಆರಂಭಿಸಿದ್ದಾರೆಂದು ಜ್ಯೋತಿ ಬಸು ಅವರು ಚುನಾವಣಾ ಆಯೋಗಕ್ಕೆ ಪತ್ರಮುಖೇನ ಆತಂಕ ವ್ಯಕ್ತಪಡಿಸಿದ್ದಾರೆ. ಇದರಂತೆಯೇ ನವಂಬರ್ 19 ರಂದು ಇಂದಿರಾ ಗಾಂಧಿಯ 67 ನೇ ಜನ್ಮ ದಿನದ ದಿವಸ ಗುಜರಾತ್ ಮತ್ತು ಮಹಾರಾಷ್ಟ್ರದ ಕಾಂಗ್ರೆಸ್ ಮಂತ್ರಿಗಳು ಹೊಸ ಯೋಜನೆಗಳನ್ನು ಕೈಗೊಳ್ಳುತ್ತೇವೆಂದು ಪ್ರಕಟಿಸಿರುವುದಲ್ಲದೆ, ಪ್ರಾಥಮಿಕ ಶಾಲೆಯ ಮಕ್ಕಳಿಗೆ ಮಧ್ಯಾಹ್ನದ ಊಟ, ಹತ್ತನೇ ವರ್ಗದವರೆಗೆ ಪುಕ್ಕಟೆ ಶಿಕ್ಷಣ ನೀಡಲಾಗುವುದೆಂದು ಸಾರಿದ್ದಾರೆ. ಅದೇ ದಿವಸ ಉತ್ತರ ಪ್ರದೇಶದ ಮುಖ್ಯಮಂತ್ರಿಯವರು ಮಾಜಿ ಪ್ರಧಾನ ಮಂತ್ರಿವರ ಹೆಸರಿಡಲಾಗುವ ಒಂದು ಸೇತುವೆಯ ಅಡಿಗಲ್ಲು ಹಾಕಿದರು.

ಇದರಂತೆಯೇ ಕೈಗಾರಿಕೆ ಮತ್ತು ಒಕ್ಕಲುತನದಲ್ಲಿ ಕೇಂದ್ರದ ಸಾಧನೆಗಳನ್ನು ದೂರದರ್ಶನದ ಮೂಲಕ ಮತದಾರರ ಮೇಲೆ ಪ್ರಭಾವ ಬೀರುವ ದೃಷ್ಟಿಯಿಂದ ಪ್ರಚಾರ ಮಾಡಲಾಗುತ್ತಿದೆ. ಇದು ಚುನಾವಣಾ ನಿಯೋಗದ ನೀತಿ ಸಂಹಿತೆಗೆ ವಿರುದ್ಧವಾಗಿರುವುದರಿಂದ ಇದರ ಕುರಿತು ಯೋಗ್ಯ ಕ್ರಮ ಕೈಗೊಳ್ಳಬೇಕೆಂದು ಜ್ಯೋತಿ ಬಸು ಚುನಾವಣಾ ಆಯೋಗವನ್ನು ಕೇಳಿಕೊಂಡಿದ್ದಾರೆ.

Printed & Published by P Ramachandra Rao by him on behalf of the Communist Party of India (Marxist) Karnataka State Committee, K. V. Temple Street, Sultanpet, Bangalore-560052 Editoral and managerial office, L-56, K. V. Temple Street, Sultanpet. B-53 Phone: 24154
Editor : P. Ramachandra Rao Managing Editor : N. K. Upadhyaya